# ಹಂಪಿ ಟೈಮ್ಸ್

HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 267 Issue: 267 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 30.04.2025 • ಬುಧವಾರ Wednesday • ಪುಟ:04 Page:04 • ಬೆಲೆ:2 Rs:2



ಬಾಳು ಬೆಳಗುವ ಜ್ಞಾನ ಅಕ್ಷಯವಾಗಲಿ

ಸಮಸ್ತ ಹಂಪಿ ಟೈಮ್ಸ್ ಓದುಗರಿಗೆ, ಜಾಹೀರಾತುದಾರರಿಗೆ, ಲೇಖಕರಿಗೆ ಹಾಗೂ ಪತ್ರಿಕೆ ವಿತರಕರಿಗೆ ಬಸವ ಜಯಂತಿ ಹಾಗೂ ಅಕ್ಷಯ ತೃತೀಯ ಹಾರ್ದಿಕ ಶುಭಾಶಯಗಳು



– ಬಸಾಪುರ ಬಸವರಾಜ
ಸಂಪಾದಕರು, ಹಂಪಿ ಟೈಮ್ಸ್





## ನಿನಗೆ ನೀನೇ ಬೆಳಕು

ನೀನು ಬಡವನಾಗಿ ಹುಟ್ಟಿದರೆ ಅದು ನಿನ್ನ ತಪ್ಪಲ್ಲ. ಆದರೆ ನೀನು ಬಡವನಾಗಿ ಸತ್ತರೆ ಅದು ಖಂಡಿತ ನಿನ್ನದೇ ತಪ್ಪು

– ಬಿಲ್‌ಗೇಟ್ಸ್

## ಆನಂದ ಬಾಣ




# 1 ರೂ ಲಂಚ ಪಡೆಯದೇ ಗ್ರಾಮ ಆಡಳಿತಾಧಿಕಾರಿಗಳ ನೇಮಕ

## ಸಿಎಂ ಸಿದ್ದರಾಮಯ್ಯ ಹೇಳಿಕೆ। ಆಡಳಿತಾಧಿಕಾರಿಗಳ ಹುದ್ದೆ ಖಾಲಿ ಇಲ್ಲದಂತೆ ಭರ್ತಿ ಮಾಡ್ತೀವಿ

■ **ಹಂಪಿ ಟೈಮ್ಸ್ ಬೆಂಗಳೂರು**



ಗ್ರಾಮ ಆಡಳಿತಾಧಿಕಾರಿಗಳ ನೇಮಕಾತಿಯನ್ನು ಒಂದು ರೂಪಾಯಿ ಲಂಚವಿಲ್ಲದೇ, ಮಧ್ಯವರ್ತಿಗಳ ಹಾವಳಿಯಿಲ್ಲದೇ ಮಾಡ ಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಕಂದಾಯ ಇಲಾಖೆಯಲ್ಲಿ ನೂತನವಾಗಿ ಆಯ್ಕೆಯಾಗಿರುವ 1000 ಗ್ರಾಮ ಆಡಳಿತಾಧಿಕಾರಿಗಳಿಗೆ ಮಂಗಳವಾರ ನೇಮಕಾತಿ ಆದೇಶ ವಿತರಣೆ, ಅಭಿಶಿಕ್ಷಣ ತರಬೇತಿ ಮತ್ತು 4000 ಕ್ರೋಮ್ ಬುಕ್ ವಿತರಣೆ ಹಾಗೂ ಸಾಧನೆಯ ಹಾದಿಯಲ್ಲಿ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದರು.

ಹಿಂದೆ 94–95 ರಲ್ಲಿ ಗೋವಿಂದೇಗೌಡರು ಇದ್ದ ಸಂದರ್ಭದಲ್ಲಿ ಒಂದು ಲಕ್ಷ ಉಪಾಧ್ಯಾಯರನ್ನು ಲಂಚವಿಲ್ಲದೇ, ಮಧ್ಯವರ್ತಿಗಳಿಲ್ಲದೇ ನೇಮಕಾತಿ ಮಾಡಲಾಗಿತ್ತು. ಪ್ರಸ್ತುತ ಆರು ಲಕ್ಷ ಅರ್ಜಿಗಳಲ್ಲಿ ಒಂದು ಸಾವಿರ ಗ್ರಾಮ ಆಡಳಿತಾಧಿಕಾರಿಗಳು ಆಯ್ಕೆಯಾಗಿದ್ದು, ಆಯ್ಕೆಯಾಗಿರುವವರು ಪುಣ್ಯವಂತರು. ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿದ ಪರೀಕ್ಷೆಯಲ್ಲಿ ಮೆರಿಟ್ ಆಧಾರದ ಮೇಲೆ ಆಯ್ಕೆಯಾಗಿದ್ದೀರಿ. 9834 ಒಟ್ಟು ಗ್ರಾಮ ಆಡಳಿತಾಧಿಕಾಗಳಿದ್ದು, ಅದರಲ್ಲಿ 8003 ಜನ ಕಾರ್ಯನಿರ್ವಹಿಸುತ್ತಿದ್ದಾರೆ. ಈಗ 1000 ಜನ ಸೇರ್ಪಡೆಯಾಗುತ್ತಿದ್ದಾರೆ. ಯಾವುದೇ ಗ್ರಾಮ ಆಡಳಿತಾಧಿಕಾರಿಯ ಹುದ್ದೆ ಖಾಲಿ ಇಲ್ಲದಂತೆ ಭರ್ತಿ ಮಾಡುವ ಕೆಲಸವನ್ನು ಸರ್ಕಾರ ಮಾಡಲಿದೆ ಎಂದು ಭರವಸೆ ನೀಡಿದರು. ಅಲ್ಲೇ ಇದ್ದು ಸಾಧ್ಯವಾದಷ್ಟು ಮಟ್ಟಿಗೆ ಗ್ರಾಮಗಳಲ್ಲಿಯೇ ವಾಸ ಮಾಡುವುದು ಉತ್ತಮ ಎಂದರು.

**ದಾಖಲೆಗಳನ್ನು ಕರಾರುವಾಕ್ಕಾಗಿಡುವುದು ಅವಶ್ಯಕ :**

ನಮ್ಮ ದೇಶ ಗ್ರಾಮಗಳ ದೇಶ. ಕೃಷಿ ಪ್ರಮುಖವಾದ ಉದ್ಯೋಗವಾಗಿದ್ದು, ಹೆಚ್ಚು ಶೇ 60 ಕ್ಕೂ ಹೆಚ್ಚು ಜನ ಕೃಷಿಯ ಮೇಲೆ ಅವಲಂಬಿತರಾಗಿದ್ದಾರೆ. ಜಮೀನುಗಳ ಲೆಕ್ಕ ಇಡುವುದು ಗ್ರಾಮ ಆಡಳಿತಾಧಿಕಾರಿಗಳ ಜವಾಬ್ದಾರಿ. ಹಳ್ಳಿಗಳಲ್ಲಿ ಶಾಂತಿ, ನೆಮ್ಮದಿ ನೆಲೆಸಲು ದಾಖಲಾತಿಗಳು ಸರಿಯಾಗಿರಬೇಕು. ದಾಖಲೆಗಳನ್ನು ಬಹಳ ಕರಾರುವಾಕ್ಕಾಗಿ ಇಡುವುದು ಅವಶ್ಯಕ. ಆಧುನಿಕ ನಾಡಿನಲ್ಲಿ ತಂತ್ರಜ್ಞಾನ, ವಿಜ್ಞಾನ ಬೆಳೆದಿದೆ. ಈಗ ಪ್ರತಿಯೊಂದೂ ಡಿಜಿಟಲೀಕರಣವಾಗಿದೆ. ಆನ್ ಲೈನ್ ನಲ್ಲಿ ದಾಖಲಾತಿಗಳನ್ನು ಪಡೆಯುವ ವ್ಯವಸ್ಥೆ ಬಂದ ನಂತರ ನಾವು ಯಾವುದೇ ಕಾರಣಕ್ಕೂ ತಪ್ಪುಗಳಿಗೆ ಅವಕಾಶ ನೀಡಬಾರದು. >>4

## ಇಂದು ಶ್ರೀ ಕೊಟ್ಟೂರು ಸಂಸ್ಥಾನ ಮಠದಲ್ಲಿ ಉಚಿತ ಸಾಮೂಹಿಕ ವಿವಾಹ, ಅಯ್ಯಾಚಾರ

■ **ಹಂಪಿ ಟೈಮ್ಸ್ ಹೊಸಪೇಟೆ**



ನಗರದ ಶ್ರೀ ಕೊಟ್ಟೂರು ಸಂಸ್ಥಾನ ಮಠದಲ್ಲಿ ಏ.30 ರಂದು ಬೆಳಿಗ್ಗೆ 10.30ಕ್ಕೆ ಕರ್ನಾಟಕದ ಸಾಂಸ್ಕೃತಿಕ ನಾಯಕ ಜಗಜ್ಯೋತಿ ಬಸವೇಶ್ವರರ 892ನೇ ಜಯಂತಿ ಹಾಗೂ 52 ನೇ ವರ್ಷದ ಉಚಿತ ಸರ್ವಧರ್ಮ ಸಾಮೂಹಿಕ ವಿವಾಹ ಪೂಜ್ಯ ಶ್ರೀ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳವರ ಸನ್ನಿಧಾನದಲ್ಲಿ ಜರುಗಲಿದೆ.

ಅದಕ್ಕೂ ಮುನ್ನ ಬೆಳಿಗ್ಗೆ 6ಕ್ಕೆ 26 ಅಯ್ಯಾಚಾರ ಲಿಂಗದೀಕ್ಷಾ ಕಾರ್ಯಕ್ರಮವು ಜರುಗಲಿದೆ ಎಂದು ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನ ಮಠದ ವ್ಯವಸ್ಥಾಪಕರು ತಿಳಿಸಿದ್ದಾರೆ.

## ರಸ್ತೆ ಕಾಮಗಾರಿ, ವಾಹನ ಸಂಚಾರ ನಿಷೇಧ

■ **ಹಂಪಿ ಟೈಮ್ಸ್ ಹೊಸಪೇಟೆ**



ನಗರದ ಹೊರವಲಯದ ಶ್ರೀ ಜಂಬುನಾಥಸ್ವಾಮಿ ದೇವಸ್ಥಾನಕ್ಕೆ ತೆರಳುವ ಮಾರ್ಗದಲ್ಲಿ ರಸ್ತೆ ಕಾಮಗಾರಿಯು ನಡೆಯುತ್ತಿದ್ದು, ದ್ವಿಚಕ್ರವಾಹನ, ಕಾರು,ಲಾರಿ ಸೇರಿದಂತೆ ಇತರೆ ವಾಹನಗಳಿಗೆ ನಿಷೆಧವಿದೆ. ಭಕ್ತಾದಿಗಳು ಮೆಟ್ಟಿಲುಗಳ ಮೂಲಕ ತೆರಳಿ ದರ್ಶನ ಪಡೆಯಬೇಕು ಎಂದು ಶ್ರೀ ಜಂಬುನಾಥ ಸ್ವಾಮಿ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದ್ದಾರೆ.

## ಮೇ.3 ಜಿಲ್ಲಾ ಮಟ್ಟದ ಜನ ಸ್ಪಂದನ

■ **ಹಂಪಿ ಟೈಮ್ಸ್ ಹೊಸಪೇಟೆ**



ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಜೆಡ್. ಜಮೀರ್ ಅಹ್ಮದ್ ಖಾನ್ ಅಧ್ಯಕ್ಷತೆಯಲ್ಲಿ ಮೇ.3 ರಂದು ಬೆಳಗ್ಗೆ 9.30 ಗಂಟೆಗೆ ಜಿಲ್ಲಾ ಮಟ್ಟದ 'ಜನ ಸ್ಪಂದನ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಆವರಣದಲ್ಲಿ ಚುನಾಯಿತ ಪ್ರತಿನಿಧಿಗಳ ಮತ್ತು ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳ ಉಪಸ್ಥಿತಿಯಲ್ಲಿ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿ, ಸ್ಥಳದಲ್ಲಿಯೇ ಪರಿಹಾರ ನೀಡುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿ, ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಪೊಲೀಸ್ ವರಿಷ್ಠಾಧಿಕಾರಿಗಳು ಅಗತ್ಯ ವ್ಯವಸ್ಥೆಗಳನ್ನು ಕಲ್ಪಿಸಿಕೊಂಡು. ವ್ಯವಸ್ಥಿತವಾಗಿ ಕಾರ್ಯಕ್ರಮವನ್ನು ಆಯೋಜಿಸಲಾಗುವುದು. ಆದ್ದರಿಂದ ಸಾರ್ವಜನಿಕರು ತಮ್ಮ ಕುಂದುಕೊರತೆಗಳ ಆಹವಾಲುಗಳೊಂದಿಗೆ ಜನಸ್ಪಂದನಾ ಸಭೆಯಲ್ಲಿ ಭಾಗವಹಿಸಿ ಪರಿಹಾರ ಕಂಡುಕೊಳ್ಳುವಂತೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ.


**Call Us for Advertisements**
Good Opportunity for Branding

ನಿಮ್ಮೂರ ಜಾತ್ರೆ ಉತ್ಸವಕ್ಕೆ ಶುಭಾಶಯ, ಸಾಧಕರಿಗೆ/ ವಿದ್ಯಾರ್ಥಿಗಳಿಗೆ ಅಭಿನಂದನೆ ಕೋರಲು ಬಯಸುವವರು

**M:9448633038**


ಕೊನೆ ಕ್ಷಣದವರೆಗೆ ಕಾದು ನಿರಾಶರಾಗಬೇಡಿ!
ಮೊದಲು ಬುಕ್ಕಿಂಗ್ ಮಾಡಿದವರಿಗೆ ಮೊದಲ ಆದ್ಯತೆ


## ಮೇ 1 ಕಾರ್ಮಿಕ ದಿನಾಚರಣೆ ಕಾರ್ಮಿಕರಿಗೆ ವೇತನ ಸಹಿತ ರಜೆ

■ **ಹಂಪಿ ಟೈಮ್ಸ್ ಚಿತ್ರದುರ್ಗ**

ಕರ್ನಾಟಕ ಕೈಗಾರಿಕಾ ಸಂಸ್ಥೆಗಳ (ರಾಷ್ಟ್ರೀಯ ಹಬ್ಬ ಮತ್ತು ರಜಾ ದಿನಗಳ) ಕಾಯ್ದೆ 1963ರ ಕಲಂ 3 ಹಾಗೂ ಕರ್ನಾಟಕ ನಿಯಮಗಳು 1964ರ ನಿಯಮ 9ರ ಮೇರೆಗೆ ಚಿತ್ರದುರ್ಗ ಜಿಲ್ಲೆಯಾದ್ಯಂತ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು, ಹೋಟೆಲ್, ರೆಸ್ಟೋರೆಂಟ್‌ಗಳು, ಕಾರ್ಖಾನೆಗಳು, ಕೈಗಾರಿಕಾ ಸಂಸ್ಥೆಗಳು ಹಾಗೂ ಇತರೆ ಸಂಸ್ಥೆಗಳು ಮೇ 01ರಂದು ಕಾರ್ಮಿಕ ದಿನಾಚರಣೆಯ ದಿನದಂದು ತಮ್ಮಲ್ಲಿ ಕೆಲಸ ಮಾಡುವ ಎಲ್ಲಾ ನೌಕರರಿಗೆ ವೇತನ ಸಹಿತ ರಜೆಯನ್ನು ನೀಡುವುದು.

ಕಾರ್ಮಿಕ ದಿನಾಚರಣೆ ದಿನದಂದು ಕಾರ್ಮಿಕರ ಒಪ್ಪಿಗೆಯನ್ನು ಪಡೆದು ಆ ಕಾರ್ಮಿಕರು ಕೆಲಸ ನಿರ್ವಹಿಸಿದ್ದಲ್ಲಿ ಕಾರ್ಯನಿರ್ವಹಿಸಿದ ಕಾರ್ಮಿಕರಿಗೆ ದುಪ್ಪಟ್ಟು ವೇತನ ನೀಡಲು ಸೂಚಿಸಿದೆ. ಈ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಸಂಬಂಧಪಟ್ಟ ಸಂಸ್ಥೆ, ನಿಯೋಜಕರ ವಿರುದ್ಧ ನಿಯಾಮಾನುಸಾರ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಚಿತ್ರದುರ್ಗ ಕಾರ್ಮಿಕ ಅಧಿಕಾರಿ ಅನಿಲ್ ಬಿ ಬಗಟಿ ತಿಳಿಸಿದ್ದಾರೆ.



## ತುಂಗಭದ್ರಾ ನೀರಿನ ಮಟ್ಟ

ಮಂಗಳವಾರ : 29–04–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1584.29 ಅಡಿ |
| ಒಳ ಹರಿವು | 371 ಕ್ಯುಸೆಕ್ |
| ಹೊರ ಹರಿವು | 330 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 6.871 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1578.22 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 260 ಕ್ಯುಸೆಕ್ |
| ಸಾಮರ್ಥ್ಯ | 3.666 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ವಿಶ್ವಾವಸು

30–04–2025 – ಬುಧವಾರ


| | |
|---|---|
| ತಿಥಿ | : ತೃತೀಯ |
| ಪಕ್ಷ | : ಶುಕ್ಲ |
| ನಕ್ಷತ್ರ | : ರೋಹಿಣಿ |
| ಯೋಗ | : ಶೋಭನ |
| ಕರಣ | : ಗರಜ |
| ಸೂರ್ಯೋದಯ | : 05:55:40 |
| ಸೂರ್ಯಾಸ್ತ | : 18:52:53 |
| ರಾಹು ಕಾಲ | : 12:24–14:01 |
| ಯಮಘಂಡ ಕಾಲ | : 07:33–09:10 |
| ಗುಳಿಕ ಕಾಲ | : 10:47–12:24 |

## ಮೇ.2 ರಿಂದ ಮೂರು ಹಂತಗಳಲ್ಲಿ ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಗೌರವಾನ್ವಿತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ್ ದಾಸ್ ಏಕ ಸದಸ್ಯ ವಿಚಾರಣಾ ಆಯೋಗ ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆಯನ್ನು ಜಿಲ್ಲೆಯಲ್ಲಿ ಮೂರು ಹಂತಗಳಲ್ಲಿ ಮೇ.2 ರಿಂದ ಆರಂಭಿಸಲಾಗುವುದು ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರಾದ ಮಂಜುನಾಥ.ಹೆಚ್.ವಿ ತಿಳಿಸಿದ್ದಾರೆ.

ಮೊದಲನೇ ಹಂತದಲ್ಲಿ ಮನೆ–ಮನೆ ಸಮೀಕ್ಷೆ ಮೇ.2 ರಿಂದ ಮೇ.17 ರವರೆಗೆ, ಮತಗಟ್ಟೆ ಪ್ರದೇಶವಾರು ವಿಶೇಷ ಶಿಬಿರಗಳಲ್ಲಿ ಸಮೀಕ್ಷೆ ಮೇ.19 ರಿಂದ ಮೇ.23ರವರೆಗೆ ಹಾಗೂ ಸ್ವಯಂ ಘೋಷಣೆ ಮೇ.19 ರಿಂದ ಮೇ.23 ರವರೆಗೆ ಅವಧಿಯಲ್ಲಿ ಸಮೀಕ್ಷೆ ಕಾರ್ಯವನ್ನು ಕೈಗೊಳ್ಳಲಾಗುವುದು. ಸಾರ್ವಜನಿಕರ ಅನುಕೂಲಕ್ಕಾಗಿ ಈಗಾಗಲೇ ಜಿಲ್ಲಾಮಟ್ಟದಲ್ಲಿ ಜಂಟಿನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ ವಿಜಯನಗರ ಹಾಗೂ ವಿಧಾನಸಭಾ ಕ್ಷೇತ್ರವಾರು ಸಹಾಯಕ ನಿರ್ದೇಶಕರು >>4

# ಸೊಂಟದ ವಿಷ್ಯ ಬ್ಯಾಡಮ್ಮ ಶಿಷ್ಯ

■ ಭೋಜರಾಜ ಸೊಪ್ಪಿಮಠ, ಕೊಪ್ಪಳ



ಬೆಳಗ್ಗೆಯಿಂದ ಸಾಯಂಕಾಲದವರೆಗೆ ಹೆಣ್ಣುಮಕ್ಕಳು ಸದಾ ಒಂದಿಲ್ಲೊಂದು ಕೆಲಸದಲ್ಲಿ ತೊಡಗಿಕೊಂಡಿರುತ್ತಾರೆ. ಇತ್ತೀಚಿನ ದಿನಗಳಲ್ಲಿ ನಿಂತುಕೊಂಡೇ ಅಡುಗೆ, ಪಾತ್ರೆ, ಬಟ್ಟೆ ತೊಳೆಯುವುದು ಮಾಡುವದರಿಂದ, ಹೆಚ್ಚು ಕೆಲಸ ಮಾಡುವದರಿಂದ ಸೊಂಟದ ನೋವು ಕಂಡು ಬರುವುದು ಸಾಮಾನ್ಯ. ಸೊಂಟ ಮತ್ತು ಬೆನ್ನೆಲು ಬಿನಲ್ಲಿರುವ ಕೀಲುಗಳು ಹಿಡಿದುಕೊಳ್ಳುವುದು, ಬೆನ್ನೆಲುಬಿಗೆ ಶ್ರಮ ಆಗುವ ರೀತಿಯಲ್ಲಿ ಕುಳಿತು ಕೊಳ್ಳುವುದು, ಜಾರಿ ಬಿದ್ದಾಗ, ಸಡನ್ನಾಗಿ ಬಗ್ಗಿದಾಗ, ಭಾರವಾದುದನ್ನು ಎತ್ತಿದಾಗ ಕೆಲವೊಂದು ಸಾರಿ ಮಹಿಳೆಯರಲ್ಲಿನ ಗರ್ಭಕೋಶಕ್ಕೆ ಸಂಬಂಧಿಸಿದ ಅನಾರೋಗ್ಯದಿಂದ ಸೊಂಟದ ನೋವು ಕಂಡು ಬರುತ್ತದೆ. ಕೆಲವೊಮ್ಮೆ ಸಣ್ಣಾಗಿ ಕಂಡು ಬರುವ ಈ ನೋವು ಕೆಲವೊಬ್ಬರಲ್ಲಿ ತೀವ್ರ ತರನಾದ ನೋವನ್ನು ಉಂಟುಮಾಡಬಲ್ಲದು. ಇಂತಹ ಸಂದರ್ಭಗಳಲ್ಲಿ ಒಂದಷ್ಟು ಸರಳೋಪಾಯಗಳನ್ನು ಕೂಡಲೇ ಮಾಡಿ ಕೊಳ್ಳಬಹುದು.

- ಮೆತ್ತನೆ ಸಮತಟ್ಟಾದ ಹಾಸಿಗೆ ಇಲ್ಲವೇ ನೆಲದ ಮೇಲೆ ತಲೆದಿಂಬು ಇಲ್ಲದೆಯೇ ನೇರವಾಗಿ ಮಲಗಿಕೊಳ್ಳಿ.



- ನೋವಾಗುವ ಭಾಗದತ್ತ ವಾಲುವುದು ಬೇಡ.
- ಮಡಿಚುವ ಕುರ್ಚಿ ಅಥವಾ ಆರಾಮದಾಯಕ ಕುರ್ಚಿಯಲಿ ಕುಳತುಕೊಳ್ಳುವುದು ಬೇಡ.
- ನೇರವಾಗಿ ನಿಂತುಕೊಂಡಿರಿ ಬಾಗುವುದು ಬೇಡ.
- ಹೆಚ್ಚು ಹೊತ್ತು ಒಂದೇ ಕಡೆ ನಿಂತುಕೊಂಡಿರಬಾರದು. ಕುಳಿತಾಗ ಎರಡೂ ಪಾದಗಳು ನೆಲಕ್ಕೆ ತಾಗುತ್ತಿರಲಿ.
- ತುದಿಗಾಲಿನ ಮೇಲೆ ನಡೆಯುವುದು, ಪದೇ ಪದೇ ಬಾಗುವುದು ಬೇಡ.
- ಸಾಧ್ಯವಾದರೆ ಕೆಲವು ಸರಳ ವ್ಯಾಯಾಮ ಮಾಡಿ.

ನಿವಾರಣಾ ಕ್ರಮಗಳು

- ಒಂದು ಗ್ರಾಂ ಅಶ್ವಗಂಧ ಚೂರ್ಣ ಅರ್ಧ ಗ್ರಾಂ ಗುಗ್ಗಳ ಹಾಗೂ ಎರಡು ಬೆಳ್ಳುಳ್ಳಿ ಸೇರಿಸಿ ಒಂದು ಕಪ್ ನೀರಿನೊಂದಿಗೆ ಬಿಸಿ ಮಾಡಿ ಸೋಸಿಕೊಂಡು ಕುಡಿದರೆ ಸೊಂಟಕ್ಕೆ ಸಂಬಂಧಿಸಿದ ನೋವುಗಳು ಕಡಿಮೆಯಾಗುವವು.
- 25 ಗ್ರಾಂ ಅಜಿವಾನ ನೂರು ಗ್ರಾಂ ಒಳ್ಳೆಣ್ಣೆಯನ್ನು ಅರ್ಧ ಲೀಟರ್ ನೀರಿನೊಂದಿಗೆ ಬೆರೆಸಿ ಎಣ್ಣೆ ಮಾತ್ರ ಉಳಿಯುವ ಹಾಗೆ ಬಿಸಿ ಮಾಡಿ ಸೋಸಬೇಕು. ನೋವು ಇರುವ ಜಾಗಕ್ಕೆ ಹಚ್ಚಿ ಮಸಾಜ್ ಮಾಡಬೇಕು. ಅರ್ಧ ಗಂಟೆಯ ನಂತರ ಬಿಸಿ ನೀರಿನಲ್ಲಿ ತೊಳೆಯಿರಿ.
- ಶುಂಠಿಯನ್ನು ಬಿಸಿಯಾಗಿಸಿ ತಣ್ಣಗಾದ ಮೇಲೆ ಪುಡಿ ಮಾಡಿ ಒಂದು ಚಮಚದಷ್ಟು ಪುಡಿಯನ್ನು ಒಂದು ಗ್ಲಾಸ್ ನೀರಿನಲ್ಲಿ ಸೇರಿಸಿ ಕಾಲು ಭಾಗ ಉಳಿಯುವ ಹಾಗೆ ಕುದಿಸಿ ಸೋಸಿ ಒಂದೆರಡು ಹನಿ ಒಳ್ಳೆಣ್ಣಿ ಬೆರೆಸಿ ಉಗುರು ಬೆಚ್ಚಗಿರುವಾಗಲೇ ದಿನಕ್ಕೆ ಎರಡು ಬಾರಿಯಂತೆ ಕುಡಿಯಬೇಕು.
- ನಾಲ್ಕೈದು ಬೆಳ್ಳುಳ್ಳಿ ಎಸಳನ್ನು ಜಜ್ಜಿ ಒಂದಷ್ಟು ಎಣ್ಣೆಯಲ್ಲಿ ಕುದಿಸಬೇಕು. ಅದನ್ನು ಆರಿದ ಮೇಲೆ ಸೋಸಿ ನೋವಿರುವ ಭಾಗಕ್ಕೆ ಹಚ್ಚಿದರೆ ಕೂಡಾ ನೋವು ಕಡಿಮೆಯಾಗುವುದು.

# ಯುಗ ಪ್ರವರ್ತಕ ಅಣ್ಣ ಬಸವಣ್ಣ

ಬೆನ್ನ ಹಿಂದೆ ನೆರಿಕೆಯನ್ನು ಕಟ್ಟಿಕೊಂಡು ಬಗಲಲ್ಲಿ ಆಗ ತಾನೆ ಮಾಡಿದ ಚಮ್ಮಾವುಗೆಗಳನ್ನು ಇಟ್ಟುಕೊಂಡು ಕುಲೀನರ ಬೀದಿಯಲ್ಲಿ ಜೋರಾಗಿ ಕೂಗುತ್ತಾ ಬಂದ ಆತ ಅವರ ಮನೆಯ ಮುಂದೆ ಬಂದು ಅವ್ವಾರೇ ಎಂದು ಕೂಗಿದ. ಮನೆಯ ಯಜಮಾನಿ ಹೊರಬಂದು ತನ್ನ ಪುಟ್ಟ ಮಗ ಬಸವನನ್ನು ಕರೆದು ಹೊಲೆಯರಾತ ಆಗ ತಾನೆ ಕೆಳಗೆ ಇಟ್ಟ ಚಪ್ಪಲಿಗಳಿಗೆ ನೀರನ್ನು ಹಾಕಿ ಒಳಗೆ ತೆಗೆದುಕೊಳ್ಳಲು ಮಗನಿಗೆ ಹೇಳಿದಳು. ತಾಯಿ ಹೇಳಿದಂತೆ ಚಪ್ಪಲಿಗಳಿಗೆ ನೀರನ್ನು ಹಾಕಿ ಒಳಗೆ ತೆಗೆದುಕೊಂಡ ಬಾಲಕನ ಮನಸ್ಸಿನಲ್ಲಿ ಯೋಚನೆಗಳ ಮಂಥನ ನಡೆಯುತ್ತಿತ್ತು.

ಮಗ ತಾಯಿಯನ್ನು ಪ್ರಶ್ನಿಸಿದ ಅವ್ವ ಅವನೇಕೆ ಹಾಗೆ ಕೂಗುತ್ತಾ ಬಂದ? ಬೆನ್ನ ಹಿಂದೆ ನೆರಿಕೆ ಕಟ್ಟಿಕೊಂಡಿರುವುದೇಕೆ?

ಅವರು ಹೊಲೆಯರು ಮಗಾ... ಕಪ್ಪು ಕಡಿ ತಿನ್ನುವ ಜನ.ಊರೊಳಗೆ ಬರುವಂತಿಲ್ಲ, ಅಕಸ್ಮಾತ್ ಬಂದರೂ ಅವರ ನೆರಳು ಅವರ ಕಾಲಡಿ ಬೀಳುವಂತಹ ಏರುಬಿಸಿಲಿನ ಹೊತ್ತಿನಲ್ಲಿ ಮಾತ್ರ ಬರಬೇಕು. ಕೂಗುತ್ತಾ ಬರುವುದು ಇಲ್ಲವೇ ಗಂಟೆ ಕಟ್ಟಿಕೊಂಡು ಬರುವ ಮೂಲಕ ಮಡಿವಂತರು ಮನೆಯ ಹೊರ ಬರದಂತೆ ಎಚ್ಚರಿಸುವುದಕ್ಕೆ ಮತ್ತು ಅವರ ಹೆಜ್ಜೆಯ ಗುರುತು ಅಳಿಸಿ ಹಾಕಲು ಅವರು ಹಾಗೆ ಬೆನ್ನಿಗೆ ನೆರಿಕೆ ಕಟ್ಟಿಕೊಂಡಿರುತ್ತಾರೆ ಎಂದು ತಾಯಿ ಮಗನಿಗೆ ತಿಳಿಹೇಳಿದಳು.

ಅವರಾ ಹೊಲೆಯರು! ಎಂದು ಮಗ ಕೇಳಿದ. ಅವರು ದನದ ಚರ್ಮದಿಂದ ಚಪ್ಪಲಿ ಮಾಡುವ ಅವರು ಹೊಲೆಯರು ಎಂದಾದರೆ ಆ ಚಪ್ಪಲಿಗಳನ್ನು ಮೆಡುವ ನಾವು ಹೇಗೆ ಕುಲೀನರಾಗುತ್ತೇವೆ ಅವ್ವ ಎಂದು ಮಗ ಪ್ರಶ್ನಿಸಿದಾಗ ಆ ತಾಯಿ ಉತ್ತರಿಸಲಾಗದೆ ದಿಗ್ಬಮೆಯಿಂದ ನಿಂತಳು.

ಎಂಟು ಶತಮಾನಗಳ ಹಿಂದೆ ಹೀಗೆ ಜಾತಿಯ ಕುರಿತು ಮಾತನಾಡಿದ ವ್ಯಕ್ತಿ ಮುಂದೆ ವಚನಗಳ ಸರಳ ಅಭಿವ್ಯಕ್ತಿಯ ಮೂಲಕ ವಚನ ಭಂಡಾರಿಯಾಗಿ, ಸ್ತ್ರೀ ಪುರುಷ ಸಮಾನತೆಯ ಸಮ ಸಮಾಜವನ್ನು ಕಟ್ಟುವ ಕ್ರಾಂತಿಕಾರಿಯಾಗಿ ಅನುಭವ ಮಂಟಪದ ಮೂಲಕ ಜಗತ್ತಿನ ಮೊತ್ತ ಮೊದಲ ಸಂಸತ್ತನ್ನು ನಿರ್ಮಿಸಿದ ಧೀಮಂತ ಪುರುಷನಾಗಿ ವಿಶ್ವಗುರುವಾದ ಬಸವಣ್ಣ.

ಕಾರ್ಲ್ ಮಾರ್ಕ್ಸ್ ನಿಗಿಂತ ಎಷ್ಟೋ ಶತಮಾನಗಳ ಮುಂಚೆಯೇ ಸಮಾಜವಾದದ ಪರಿಕಲ್ಪನೆಯನ್ನು ಮೂಡಿಸಿದ ಬಸವಣ್ಣ ನಮ್ಮ ಕನ್ನಡ ನಾಡಿನಲ್ಲಿ ಹುಟ್ಟಿ ಇಡೀ ಜಗತ್ತಿನಲ್ಲಿ ತನ್ನ ಪ್ರಖರ ಜ್ಞಾನ ಸುಧೆಯನ್ನು ಹರಿಸಿದ ಅಸೀಮ ವ್ಯಕ್ತಿ.

ಹುಟ್ಟಿದ್ದು ಕುಲೀನ ಮನೆತನದಲ್ಲಾದರೂ ಬಸವಣ್ಣನವರು ಸಾಮಾಜಿಕ ಮೇಲು-ಕೀಳುಗಳನ್ನು ಪ್ರಶ್ನಿಸಿದರು. ನಾವು ನಡೆಯುವ ನೆಲ, ಕುಡಿಯುವ ನೀರು,ಸೇವಿಸುವ ಗಾಳಿ, ನಮ್ಮ ದೇಹದಲ್ಲಿ ಹರಿಯುವ ರಕ್ತ ಎಲ್ಲವೂ ಒಂದೇ ಇರುವಾಗ ಅದು ಹೇಗೆ ನಾವು ಮೇಲು ಕೀಳು ಎಂದು ವಿಭಜಿಸಬೇಕು. ಹೊಲಸು ತಿಂಬುವನೇ ಮಾದಿಗ ಸದಾಚಾರ ಸನ್ನಡತೆಗಳನ್ನು ಹೊಂದಿರುವಾತನೇ ಕುಲೀನ ಎಂದು ಬಸವಣ್ಣನವರು ಹೇಳಿದರು. ಬ್ರಾಹ್ಮಣ ಯುಗದಲ್ಲಿ ವೇದೋಪನಿಷತ್ತುಗಳಲ್ಲಿ ಅಡಕವಾಗಿರುವ ಅತ್ಯುನ್ನತವಾದ ತತ್ವಗಳನ್ನೆಲ್ಲಾ ಮರೆತು ಕೇವಲ ಬಾಹ್ಯಾಚಾರಗಳಲ್ಲಿ ಹೆಮ್ಮೆಪಟ್ಟುಕೊಂಡ ಸಮಯದಲ್ಲಿ ಬಾಹ್ಯ ಆಚಾರಗಳು ಮೇಲು ಕೀಳುಗಳೆಂಬ ಅಸಮಾನತೆಗೆ ಎಡೆ ಮಾಡಿಕೊಟ್ಟವು. ಜಾತಿ ಪದ್ಧತಿಯು ಚತುರ್ವರ್ಣಗಳಿಗೆ ದಾರಿ ಮಾಡಿದವು ಪುರೋಹಿತಶಾಹಿ ವ್ಯವಸ್ಥೆ ತಲೆಯೆತ್ತಿಸಮಾಜದ ಉಳಿದ ವರ್ಗದವರು ಇದಕ್ಕೆ ತಲೆ ಬಾಗಿದರು. ಆದರೆ ಇದರ ವಿರುದ್ಧ 'ಮಾನವ ಜಾತಿ ತಾನೊಂದೇ ವಲಂ' ಎಂದು ಹೇಳುವ ಬಸವ ತತ್ವ ಕೇವಲ ಸಿದ್ಧಾಂತವಲ್ಲ ಅದೊಂದು ಕ್ರಾಂತಿಕಾರಿ ತತ್ವ.... ಈ ತತ್ವವನ್ನು ಹುಟ್ಟು ಹಾಕಿದಾತನೇ ಬಸವಣ್ಣ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಅಸ್ಪೃಶ್ಯತಾ ನಿವಾರಣೆಗಾಗಿ ಬಸವಣ್ಣನವರು 800 ವರ್ಷಗಳ ಕೆಳಗೆ ಮಾಡಿದ ವರ್ಣಸಂಕರ ವಿವಾಹವು ಜಗತ್ತಿನ ಯಾವುದೇ ಸಮಾಜ ಸುಧಾರಕರು ಕ್ರಾಂತಿ ಪುರುಷರು ಮಾಡದ ಕಾರ್ಯವಾಗಿತ್ತು. ಇಂದಿಗೂ ಕೂಡ ಬಹುತೇಕ ಮಠಗಳ ಪೀಠಾಧಿಪತಿಗಳು ಈ ಧೈರ್ಯವನ್ನು ಮಾಡದೆ ಇರಲು ಕಾರಣ ಸಾಮಾಜಿಕವಾಗಿ ಅವರಿಗೆ ಉಂಟಾಗುವ ವಿರೋದ ಗಳು.

ವಿಶ್ವ ಮಾನವ ತತ್ವವನ್ನು ಜಗತ್ತಿಗೆ ಸಾರಿದ ಕನ್ನಡದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕವಿ ಕುವೆಂಪು ಅವರು ""ಸಾಮಾಜಿಕ ದೃಷ್ಟಿಯಿಂದ ಬಸವೇಶ್ವರರಷ್ಟು ಅದ್ಭುತ ಕೆಲಸ ಮಾಡಿದವರು ಯಾರು ಇಲ್ಲ. ಅಂದು ಬಸವಣ್ಣನವರು ಮಾಡಿದ ಸಾಮಾಜಿಕ ಪರಿವರ್ತನೆ ಯನ್ನು ನಮ್ಮ ದೇಶ ಆಗ ಒಪ್ಪಿಕೊಂಡಿದ್ದ ಪಕ್ಷದಲ್ಲಿ ಮುಸ್ಲಿಮರು, ಕ್ರಿಶ್ಚಿಯನ್ನರು ಇಲ್ಲಿಗೆ ಬಂದು ಬೇರು ಬಿಡುತ್ತಿರಲಿಲ್ಲ ನಾನು ಈಗ ಹೇಳುವ ವಿಶ್ವಮಾನವ ತತ್ವವು ಎಂದೋ ಬರುತ್ತಿತ್ತು ನಮ್ಮಲ್ಲಿ ಸಾಕಷ್ಟು ದೊಡ್ಡ ದೊಡ್ಡ ಸಾಹಿತಿಗಳಿದ್ದಾರೆ , ಸಾಹಿತ್ಯ ದೃಷ್ಟಿಯಿಂದ ಮಹೋನ್ನತರು ಹೌದು, ಆದರೆ ಸಾಮಾಜಿಕ ದೃಷ್ಟಿಯಿಂದ ಇನ್ನೂ ಸಂಪ್ರದಾಯಕ್ಕೆ ಅಂಟಿಕೊಂಡಿದ್ದಾರೆ...ಮಠಾಧೀಶರನ್ನಂತೂ ಬಿಟ್ಟುಬಿಡಿ ಎಂದು 1983 ರಲ್ಲಿ ಕನ್ನಡಪ್ರಭ ಪತ್ರಿಕೆಯ ಬಿ ಎಂ ಚಂದ್ರಕಾಂತರಿಗೆ ಕೊಟ್ಟ ವಿಶೇಷ ಸಂದರ್ಶನದಲ್ಲಿ ಕುವೆಂಪು ಅವರು ಬಸವಣ್ಣನವರನ್ನು ಕುರಿತು ಕೊಂಡಾಡಿದ್ದರು. ಅವರ ಮಾತು ಸತ್ಯವಲ್ಲವೇ ?

ಸಕಲ ಮಾನವರು ಒಂದೇ ಎಂದು ಬಸವಣ್ಣ ಬರಿ ಮಾತಿನ ಶಾಸ್ತ್ರವನ್ನು ಹೇಳದೆ ಬದುಕಿನ ಎಲ್ಲ ಕ್ಷೇತ್ರದಲ್ಲೂ ನಡೆದು ತೋರಿಸಿದ. ಧಾರ್ಮಿಕ ಕ್ಷೇತ್ರದಲ್ಲೂ ಕೂಡ. "ಭಕ್ತನ ಕುಲವಾವುದೆಂದು ಕೇಳಿದರೆ ತಲೆದಂಡ ತಲೆದಂಡ' ಎಂದು ಶಪಥ ಮಾಡಿದರು ಬಸವಣ್ಣ.

ವ್ಯಕ್ತಿಯು ಮಾಡುವ ಕಸುಬಿಗೂ, ಹಾಗೆಯೇ ಆತ ಮಾಡುವ ಕಾಯಕಕ್ಕೂ ಮೇಲು ಕೀಳು ಎಂಬುದು ಇಲ್ಲ. ಕಾಯಕ ಯಾವುದಾದರೇನು? ಕಾಯಕ ಸಾಮಾಜಿಕ ಮತ್ತು ಆರ್ಥಿಕ ಸರಿ ಸಮಾನತೆಯ ಸೂತ್ರ ಎಲ್ಲರೂ ಕಾಯಕದ ಬದುಕಿನಿಂದಲೇ ಬದುಕಬೇಕು ಚರ್ಮದ ಕಸುಬು ಮಾಡುವವರನ್ನು ಅತ್ಯಂತ ನಿಕೃಷ್ಟ ದೃಷ್ಟಿಯಿಂದ ನೋಡುತ್ತಾ ಬಂದಿರುವ ಸಮಾಜದಲ್ಲಿ ಬಸವಣ್ಣನವರು ಅವರಿಗೆ ಸಮಾನ ಸ್ಥಾನಮಾನವನ್ನು ಕೊಟ್ಟು ಅಸ್ಪೃಶ್ಯರನ್ನೆಲ್ಲ ಲಿಂಗಧಾರಿಗಳನ್ನಾಗಿಸಿದ ಮಹನೀಯ. ಆದ್ದರಿಂದಲೇ ಆತ ಕಾಯಕ ತತ್ವದ ಮಹಾ ಶಿಲ್ಪಿಯಾದ. ಬಸವಣ್ಣನವರ ಕಾಲದಲ್ಲಿಯೇ ಮಾದಾರ ಚೆನ್ನಯ್ಯ, ಸೂಳೆ ಸಂಕವ್ವೆ, ಕಸಗುಡಿಸುವ ಸತ್ಯಕ್ಕ,ಬಹುರೂಪಿ ಚೌಡಯ್ಯ ಹಡಪದ ಅಪ್ಪಣ್ಣ, ಡೋಹರ ಕಕ್ಕಯ್ಯ, ನುಲಿಯ ಚಂದಯ್ಯ, ಕಂಬಳಿ ನಾಗದೇವ, ಮಡಿವಾಳ ಮಾಚಿದೇವ ಮುಂತಾದ ಶರಣರು ಮೂಡಿ ಬಂದರು. ಸರ್ವ ಧರ್ಮ ಸಮಾನತೆ ಸರ್ವ ಜನ ಸಮಾನತೆಯನ್ನು ಅಂದು ಬಸವಣ್ಣ ತೋರಿದ. ಆ



ಹಾದಿಯು ಇಂದು ನಮಗೆ ಸಂವಿಧಾನದತ್ತ ಹಕ್ಕಾಗಿದ್ದರೂ ಕೂಡ ಇಂದಿಗೂ ಕೂಡ ಜಾತೀಯ ದ್ವೇಷ ಅಸೂಯೆ ನಮ್ಮಲ್ಲಿ ಹಾಸು ಹೊಕ್ಕಾಗಿದೆ.

ಅಸ್ಪೃಶ್ಯತೆಯು ಅನೈತಿಕತೆಯ ಕುರುಹು, ಅವನತಿಯ ಚಿಹ್ನೆ, ನಾಡಿನ ಕೇಡಿಗೆ ಮೂಲ ಎಂದು ಹೇಳಿದ ಬಸವಣ್ಣ ಅಸ್ಪೃಶ್ಯತೆಯು ರಾಷ್ಟ್ರೀಯ ಸ್ವಾತಂತ್ರ್ಯದ ಹರಣಕ್ಕೆ ಕಾರಣ.ವಿದೇಶಿ ಮತಗಳ ಪ್ರಚಾರಕ್ಕೆ ಜಾತೀಯತೆ ಮತ್ತು ಅಸ್ಪೃಶ್ಯತೆಗಳೇ ಮುಖ್ಯ ಕಾರಣ ಎಂಬುದನ್ನು ನಾವು ಇಂದು ಇತಿಹಾಸದಿಂದ ತಿಳಿಯಬಹುದಾಗಿದೆ ಎಂದು ಲೇಖಕರಾದ ದೇ.ಜವರೇಗೌಡ ಅವರು ಹೇಳಿದ್ದಾರೆ. ಅಸ್ಪೃಶ್ಯತೆಯ ನಿರ್ಮೂಲನಕ್ಕಾಗಿ ತಮ್ಮ ಪ್ರಾಣವನ್ನೇ ಪಣಕ್ಕೊಡ್ಡಿದ ಮಹಾವ್ಯಕ್ತಿ ಬಸವಣ್ಣ.

**ಕನಿಷ್ಟ ಕುಲದಲ್ಲಿ ಹುಟ್ಟಿದ ಕರ್ಮವ ಕಳೆದು**
**ಮುಟ್ಟಿ ಪಾವನ ಮಾಡಿಕೊಟ್ಟನಯ್ಯ**
**ಎನ್ನ ಕರಸ್ಥಳಕ್ಕೆ ಲಿಂಗವ ಕೊಟ್ಟನಯ್ಯ**
**ಆ ಲಿಂಗ ಬಂದು ಸೋಂಕಿದೊಡನೆ**
**ಎನ್ನ ಸರ್ವಾಂಗದ ಅವಲೋಹವಳಿಯಿತ್ತಯ್ಯಾ**

ಎನ್ನುವ ಡೋಹರ ಕಕ್ಕಯ್ಯ ನ ವಚನವು ಬಸವಣ್ಣನವರ ದಲಿತೋದ್ಧಾರದ ಕೃತ್ಯಕ್ಕೆ ಸಾಕ್ಷಿಯಾಗಿತ್ತು ಎಂದರೆ ತಪ್ಪಿಲ್ಲ. ಬಸವಣ್ಣನವರು ಮಾತಿನ ಏಣಿ ಹಾಕಿದವರಲ್ಲ ಕ್ರಿಯಾಶೀಲರು ಎನ್ನುವುದಕ್ಕೆ ಅವರ ಕ್ರಾಂತಿಕಾರಕ ಬದಲಾವಣೆಗಳೇ ಕಾರಣ. ಬಸವಣ್ಣನವರು ತನ್ನಲ್ಲಿಯೇ ಎಲ್ಲರನ್ನು, ಎಲ್ಲರಲ್ಲೂ ತನ್ನನ್ನೇ ಕಂಡು ಲೌಕಿಕ ಜೀವನದಲ್ಲಿ ಬೇಕಾದ ಸರಿ ಸಮಾನತೆಯನ್ನು ಬದುಕಿ ತೋರಿಸಿದರು. ಬಸವಣ್ಣನವರು ಕುಲ ಹದಿನೆಂಟು ಜಾತಿಯರನ್ನು ಒಂದೇ ಎಂದು ಕಂಡರೆ ಬಸವ ಭಕ್ತರಲ್ಲೇ ಕುಲ ಹದಿನೆಂಟು ಒಳಪಂಗಡಗಳಾಗಿವೆ. ಇದು ಖಂಡಿತವಾಗಿಯೂ ಸಲ್ಲದು.

ಮೌಢ್ಯವೇ ಮನುಷ್ಯನ ಎಲ್ಲಾ ಸಂಕಟಗಳಿಗೂ ಮೂಲ ಕಾರಣ ಆದ್ದರಿಂದ ಮನುಷ್ಯನ ಮನಸ್ಸಿಗೆ ಮಂಕು ಬೂದಿ ಚೆಲ್ಲಿ ಮಾಡಬಾರದ ಅನ್ಯಾಯಗಳನ್ನು ಮಾಡುತ್ತಾ ಬಂದಿರುವ ಬಲ್ಲವರು ಬಲ್ಲಿದರು ಧರ್ಮದ ವ್ಯಾಪಾರಿಗಳಾಗಿದ್ದರು. ಇಂತಹ ಧರ್ಮದ ವ್ಯಾಪಾರಿಗಳನ್ನು ಅನಾಮತ್ತಾಗಿ ಸವರಿ ಹಾಕಿ ಗುಡಿ ಗುಂಡಾರಗಳಿಗೆ ಹೋಗುವುದನ್ನು ತಪ್ಪಿಸಿ, ಹೋಗಲಾರದವರನ್ನು ಕೂಡ ಒಲಿಸಿ ಇಷ್ಟ ಲಿಂಗವನ್ನು ಕರಸ್ತಲದಲ್ಲಿ ತಂದು ಇಟ್ಟು ಪೂಜಿಸಲು ಹೇಳಿದಾತ ಬಸವಣ್ಣ. ಕಾಯಕವೇ ಕೈಲಾಸ ಎಂದು ಕಾಯಕದ ಮಹತ್ವವನ್ನು

"ಎನ್ನ ಕಾಲೇ ಕಂಬಗಳು ದೇಹವೇ ದೇವಾಲಯ ಶಿರವೇ ಹೊನ್ನ ಕಳಸ" ಎಂದು ದೇಹವನ್ನು ದೇಗುಲವಾಗಿಸಿಕೊಳ್ಳುವ ನಿಟ್ಟಿನಲ್ಲಿ ಬಸವಣ್ಣನವರು ಎಲ್ಲ ವರ್ಗದವರಿಗೂ ಸೂಚಿಸಿ ಅಂತೆಯೇ ನಡೆದು ತೋರಿದರು. ಬಸವಣ್ಣನವರ ಅನುಭವ ಮಂಟಪದಲ್ಲಿ ಎಲ್ಲ ಜಾತಿ ಧರ್ಮಗಳ ಎಲ್ಲಾ ಕುಲ ವರ್ಗಗಳ ಬಡವ ಬಲ್ಲಿದನೆಂಬ ಭೇದವಿಲ್ಲದೆ ಎಲ್ಲರಿಗೂ ಅವಕಾಶ ಒದಗಿಸಲಾಗಿತ್ತು. ತನ್ನ ಅಕ್ಕನಿಗೆ ಇಲ್ಲದ ಜನಿವಾರ ತನಗೇಕೆ? ಎಂದು ಪ್ರಶ್ನಿಸಿದ ಬಾಲಕ ಬಸವಣ್ಣ ಸ್ತ್ರೀ ಪುರುಷ ಸಮಾನತೆಗೆ ನಾಂದಿ ಹಾಡಿ ಅಂದಿನ ಸಾಮಾಜಿಕ ಸಂಪ್ರದಾಯಗಳ ವಿರುದ್ಧ ಕಿಡಿ ಕಾರಿದರು. ಬಸವಣ್ಣವರ ಕಾಲದಲ್ಲಿದ್ದ ಮುನ್ನೂರು ಶರಣರಲ್ಲಿ 70 ಜನ ಶರಣೆಯರಿದ್ದರು ಎಂದರೆ ಅದರ ಮಹತ್ವ ನಮಗೆ ಅರಿವಾದೀತು.

ಸ್ತ್ರೀಯರ ಮನದ ಒಳದನಿಗೆ ಮಾತಿನ ರೂಪ ಕೊಟ್ಟಾತ ಬಸವಣ್ಣ. ಅನಾದಿಕಾಲದಿಂದಲೂ ತೊತ್ತಿನಂತೆ,ಸೊತ್ತಿನಂತೆ ಭಾಸವಾಗುತ್ತಿದ್ದ ಹೆಣ್ಣಿಗೆ ಆತ್ಮದ ಒಳ ಅರಿವನ್ನು ಮಾಡಿಕೊಟ್ಟಾತ ಬಸವಣ್ಣ. ಹೆಣ್ಣು ಮಕ್ಕಳಿಗೆ ಅವರ ಅಸ್ಮಿತೆಯ ಅನುಭವ ದರ್ಶನ ಮಾಡಿಸಿದಾತ ಬಸವಣ್ಣ.

ಕಳಚೂರ್ಯ ವಂಶದ ಬಿಜ್ಜಳ ಮಹಾರಾಜನ ಸಹೋದರಿಯನ್ನೇ ಮದುವೆಯಾಗಿದ್ದರೂ ಕೂಡ ದೊರೆ ಆತನಿಗೆ ಪರಮಾಪ್ತನಾಗಿದ್ದರೂ ಕೂಡ ಎಂದೂ ತನ್ನ ಎಲ್ಲೆಯನ್ನು ಮೀರದ ಬಸವಣ್ಣ ಶುದ್ಧ ಸ್ನೇಹವನ್ನು ಕಾಪಾಡಿಕೊಂಡು ಬಂದಾತ. ಬಿಜ್ಜಳನ ಪ್ರಾಣ ಹಾರಿ ಹೋಯಿತು ಎಂಬ ಸುದ್ದಿಯನ್ನು ತಿಳಿದಾಗ ನೊಂದು ಕಣ್ಣೀರಿಟ್ಟ ಬಸವಣ್ಣ. ಯಾರ ಮುಖ ನೋಡಿದರೆ ಅಪಶಕುನ ಎಂದು ಹೇಳುತ್ತಿದ್ದರೋ ಅಂತಹ ಹಡಪದ ಜನಾಂಗದ ಅಪ್ಪಣ್ಣನವರನ್ನು ನೋಡಿಯೇ ತನ್ನ ಬಳಿ ಬರಬೇಕು ಎಂದು ಕಟ್ಟಳೆಯನ್ನು ವಿಧಿಸಿ ಸಾಮಾಜಿಕ ಮೌಢ್ಯವನ್ನು ವಿರೋಧಿಸಿದಾತ ಬಸವಣ್ಣ.

ಬಸವಣ್ಣನವರು ಇಹಲೋಕ ಬಂಧನದಿಂದ ಪಾರಾಗಲು ಕಾಡು ಪಾಲಾಗುವ ಪಲಾಯನ ಮಾರ್ಗವನ್ನು ಬೋಧಿಸಲಿಲ್ಲ ಕಾಯಕವೇ ಕೈಲಾಸ ಎಂದು ಬೋಧಿಸಿ ಸಕಲ ಕರ್ಮವು ಶ್ರೇಷ್ಠ ಎಂದು ಬೋಧಿಸಿದರು.

ಜೀವಕ್ಕೆ ಜನನ ಮರಣಗಳು ತಪ್ಪಿದ್ದಲ್ಲ, ಹುಟ್ಟಿದ ಮೇಲೆ ಕರ್ಮ ಬಿಟ್ಟಿದ್ದಲ್ಲ ಪ್ರತಿನಿತ್ಯವೂ ನಾವು ಆಹಾರ ಎನ್ನುವ ಅನ್ನವನ್ನು ಈ ಘಟಕ್ಕೆ ಹಾಕಲೇಬೇಕಾದ ಕೂಳು ಎಂದು ಚಪ್ಪರಿಸುವ ಬದಲು ಭಗವಂತನಿಗೆ ಎಡೆ ಮಾಡಿ ಅವನು ನೀಡಿದ ಪ್ರಸಾದ ಎಂದು ಸೇವಿಸಿದರೆ ಮನಸ್ಸು ಪ್ರಶಾಂತತೆಯನ್ನು ಅನುಭವಿಸುತ್ತದೆ. ಹೊಟ್ಟೆಗೆ ಬೇಕಾಗುವ ಆಹಾರವನ್ನು ಸೇವಿಸಲು ಅವಶ್ಯಕವಾದ ದುಡಿಮೆಯನ್ನು ಕೆಲಸ ಎಂದು ಭಾವಿಸದೆ ಕಾಯಕ ಎಂದು ದೈವಿಕ ಕಾರ್ಯವೆಂಬಂತೆ ಮಾಡಿದಲ್ಲಿ ಕಾಯ ಮತ್ತು ಕಾಯಕಗಳು ಕೈಲಾಸವಾಗಿ ತೋರುವ ದರಲ್ಲಿ ಅಚ್ಚರಿಯೇನಲ್ಲ ಎಂದು ಹೇಳಿಕೊಟ್ಟವರು ಬಸವಣ್ಣ.

ಮಾನವ ಕುಲದ ಏಕತೆಯನ್ನು ಸಾಧಿಸುವಲ್ಲಿ ಧರ್ಮದ ಪಾತ್ರ ಮಹತ್ವವಾದದ್ದು ಎಂಬ ದಿಶೆಯಲ್ಲಿ ಆಧ್ಯಾತ್ಮಿಕ ತಳಹದಿಯ ಮೇಲೆ ಸರ್ವ ಸಮಾನತೆಯ ಸಮಾಜವನ್ನು ಕಟ್ಟಲು ಬಸವಣ್ಣನವರು ಹೆಣಗಿದರು. ಧರ್ಮಕ್ಕೆ ಇರುವ ಸಾಂಪ್ರದಾಯಿಕತೆ ಮತ್ತು ಚಿರಂತನ ವಾದ ಎರಡು ಮುಖಗಳನ್ನು ಕಟ್ಟುನಿಟ್ಟಾದ ಧರ್ಮದ ಅಚರಣೆಗಳು ಮತ್ತು ಸಂಪ್ರದಾಯದ ಆಚರಣೆಗಳಿಗೆ ಮೊದಲನೆಯದ್ದು ಆಕರವಾದರೆ ಎರಡನೆಯ ಮುಖವಾದ ಚಿರಂತನ ಮೌಲ್ಯದಲ್ಲಿ ಮಾನವೀಯ ಮೌಲ್ಯಗಳಾದ ಸತ್ಯ, ಅಹಿಂಸೆ, ದಯೆ, ಜನ ಸೇವೆ, ವಿಶ್ವ ಬ್ರಾತೃತ್ವ ಹಾಗೂ ಪರಮತ ಸಹಿಷ್ಣುತೆಗಳು ಸೇರಿವೆ. ವ್ಯಕ್ತಿ ಹಾಗೂ ಸಮಾಜದ ವಿಕಾಸಕ್ಕಾಗಿ ಇವೆರಡು ಅಂಶಗಳ ತೂಕ ಬದ್ಧವಾದ ಪಾಲನೆ ಅವಶ್ಯವಾಗಿದ್ದು ಈ ಮೌಲ್ಯಗಳನ್ನು ತೂಕ ತಪ್ಪದಂತೆ ಆಚರಿಸಬೇಕು.

ಮಹಾದ್ರಷ್ಟಾರರಾದ ಬಸವಣ್ಣನವರು ಸಾಂಪ್ರದಾಯಿಕತೆಗಿಂತ ಮಾನವೀಯ ಮೌಲ್ಯಗಳಿಗೆ ಹೆಚ್ಚು ಮಹತ್ವವನ್ನು ನೀಡಿ ಮೌಲ್ಯಗಳ ತಳಹದಿಯ ಮೇಲೆ ನವ ಸಮಾಜದ ನಿರ್ಮಾಣ ಮಾಡಲು ಯತ್ನಿಸಿದರು. ನಾವೆಲ್ಲ ಒಂದೇ ಮೂಲದಿಂದ ಬಂದವರೆಂದು ವಿವಿಧ ಧರ್ಮಗಳು ಪ್ರತಿಪಾದಿಸುವಂತೆ ಇಂದಿನ ವೈಜ್ಞಾನಿಕ ಶೋಧನೆಗಳು ಒಳಪಡಿಸುತ್ತವೆ ಇದನ್ನು ಮನಗಂಡ ಬಸವಣ್ಣನವರು "ದೇವನೊಬ್ಬ ನಾಮ ಹಲವು" ಪರಮ ಪ್ರತಿವ್ರತೆಗೆ ಗಂಡನೊಬ್ಬ

ಮತ್ತೊಂದಕ್ಕೆರಗಿದಡೆ ಕಿವಿ ಮೂಗ ಕೊಯ್ಯುವನು ಹಲವು ದೈವದ ಎಂಜಲು ತಿಂಬುವರನೇನೆಂಬೆ ಕೂಡಲಸಂಗಮದೇವ ಎಂದು ಹೇಳಿದ್ದಾರೆ

ಇಬ್ಬರೂ ಮೂವರು ದೇವರೆಂದು ಉಬ್ಬುಬ್ಬಿ ಮಾತಾಡಬೇಡ
ಒಬ್ಬನೇ ಕಾಣಿರೋ ಇಬ್ಬರೆಂಬುದು ಹುಸಿ ನೋಡ ಕೂಡಲಸಂಗಮ
ದೇವನಲ್ಲದೆ ಇಲ್ಲವೆಂದಿತ್ತು ವೇದ

ಎಂದು ಇಡೀ ಮಾನವ ಕುಲ ಕೋಟಿಗೆ ಸಕಲ ಜೀವರಾಶಿಗಳಿಗೆ ದೇವರೊಬ್ಬನೇ ಒಡೆಯ ಎಂದು ಒತ್ತಿ ಹೇಳಿದ್ದಾರೆ.

**ಇವನಾರವ ಇವನಾರವ ಇವನಾರವ ಎಂದೆಣಿಸದಿರಯ್ಯ**
**ಇವ ನಮ್ಮವ ಇವ ನಮ್ಮವ ಇವ ನಮ್ಮವ ನೆಂದೆಣಿಸಯ್ಯ**
**ಕೂಡಲಸಂಗಮದೇವ**
**ನಿಮ್ಮ ಮನೆಯ ಮಗನೆನಿಸಯ್ಯ**

ಎಂದು ವಿಶ್ವ ಬಂಧುತ್ವವನ್ನು ಸಾರುವ ಬಸವಣ್ಣನವರ ಈ ವಚನದ ಸಾರವನ್ನು ಅರಿತು ಬಾಳಿದರೆ ನಮ್ಮ ದೇಶದಲ್ಲಷ್ಟೇ ಅಲ್ಲ ಇಡೀ ವಿಶ್ವದ ಎಲ್ಲ ಸಮಸ್ಯೆಗಳು ತಾವಾಗಿಯೇ ಪರಿಹಾರವಾಗುತ್ತದೆ.

ಮನುಷ್ಯ ತಾನು ದುಡಿದದ್ದರಲ್ಲಿ ಒಂದು ಪಾಲು ತನ್ನ ಕುಟುಂಬವನ್ನು ನೋಡಿಕೊಳ್ಳಲು, ಮತ್ತೊಂದು ಪಾಲು ಮಕ್ಕಳ ಸಲುವಾಗಿ ಇನ್ನೊಂದು ಪಾಲನ್ನು ದಾಸೋಹ ರೂಪದಲ್ಲಿ ಸಮಾಜದ ದೀನ ದಲಿತರ, ಬಡ ದರಿದ್ರರ ಉದ್ಧಾರಕ್ಕಾಗಿ ನೀಡಲೇಬೇಕು ಎಂಬ ಅಲಿಖಿತ ನಿಯಮವನ್ನು ಮಾಡಿದ ಬಸವಣ್ಣನವರು ಕಾಯಕದಿಂದ ಪಡೆದ ಸಂಪತ್ತನ್ನು ದಾಸೋಹದ ಮೂಲಕ ವಿನಿಯೋಗಿಸಬೇಕು ಎಂಬ ತತ್ವವನ್ನು ಜಗತ್ತಿಗೆ ಬೋಧಿಸಿದರು.

"ಅನ್ಯರ ಒಂದು ಪೈಸೆಯನ್ನು ಮುಟ್ಟಿದೆನಾದೆಡೆ ನನ್ನ ಕೊರಳ ಲಿಂಗದ ಆಣೆ" ಎಂಬ ಮಾತನ್ನು ಹೇಳುತ್ತಾ ಅಪರಿಗ್ರಹ ತತ್ವವನ್ನು ಪಾಲಿಸಿದವರು ಬಸವಣ್ಣ. ತನ್ನ ಮನೆಗೆ ಕಳ್ಳತನಕ್ಕೆ ಬಂದ ವ್ಯಕ್ತಿಗೆ ಪತ್ನಿಯ ಕಿವಿಯೋಲೆಯನ್ನು ಬಿಚ್ಚಿಸಿಕೊಟ್ಟ ಮಹಾನುಭಾವ ಬಸವಣ್ಣ ಅಗತ್ಯಕ್ಕಿಂತ ಹೆಚ್ಚಿನ ಸಂಗ್ರಹವನ್ನು ನಿಷ್ಠುರವಾಗಿ ವಿರೋಧಿಸಿದವರು.

ಕೇವಲ ಪಂಡಿತರ ಜ್ಞಾನಿಗಳ ಆಚಾರ್ಯರ ಸ್ವತ್ತಾಗಿದ್ದ ಸಾಹಿತ್ಯವನ್ನು ಅತ್ಯಂತ ಸರಳವಾದ ಆಡು ಭಾಷೆಯಲ್ಲಿ ಜನಸಾಮಾನ್ಯರು ಕೂಡ ರಚಿಸಲು ಸಾಧ್ಯವಾಗುವಂತಹ ವಚನಗಳ ರೂಪದಲ್ಲಿ ಬರೆಸಿದರು. ಬರೆದಂತೆ ಬದುಕಿದ ಅನುಭವಿಸಿದ ಎಲ್ಲವನ್ನು ಅನುಭಾವದ ಮೂಸೆಯಲ್ಲಿ ಪರೀಕ್ಷಿಸಿ ವಚನಗಳ ರೂಪದಲ್ಲಿ ಕಟ್ಟಿಕೊಡಲು ಕಾರಣೀಭೂತರಾದರು. ಮೌಲ್ಯಗಳನ್ನು ಬದುಕಿನ ಮೂಲ ಆಧಾರವನ್ನಾಗಿಸಿಕೊಂಡು ಶರಣರು ಬದುಕು ಬರಹಗಳನ್ನು ಒಂದಾಗಿಸಲು ಪ್ರೇರಕರಾದರು.

ಧಾರ್ಮಿಕವಾಗಿ, ಸಾಮಾಜಿಕವಾಗಿ, ಸಮ ಸಮಾಜದ ಕನಸು ಕಂಡು ಅದರ ನಿರ್ಮಾಣಕ್ಕೆ ತನ್ನ ತನು ಮನ ಧನವನ್ನು ಅರ್ಪಿಸಿ ಬಹಳಷ್ಟು ಯಶಸ್ಸನ್ನು ಕಂಡ ಬಸವಣ್ಣ ಯುಗ ಪ್ರವರ್ತಕ ಎಂದರೆ ಅಚ್ಚರಿ ಏನಲ್ಲ. ಬಸವ ಭಕ್ತರೆಂಬ ಹೆಸರಿನಲ್ಲಿ ನಾವು ಆತನ ಸಂದೇಶವನ್ನು ಜಗತ್ತಿಗೆ ಸಾರಬೇಕು ಅದಕ್ಕಿಂತ ಹೆಚ್ಚಾಗಿ ಆಚರಣೆಯಲ್ಲಿ ತರಬೇಕು. ಮಾನವೀಯ ಮೌಲ್ಯಗಳನ್ನು ನಮ್ಮದಾಗಿಸಿಕೊಂಡು ಕಾಯಕ ದಾಸೋಹ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವ ಮೂಲಕ ಮಹಾ ಯುಗ ಪ್ರವರ್ತಕ ಬಸವಣ್ಣನಿಗೆ ಗೌರವ ಸಮರ್ಪಣೆ ಮಾಡೋಣ.

## ನಿಮ್ಮ ಬೆಂಬಲವೇ ಪತ್ರಿಕೆಯ ಸ್ವತಂತ್ರತೆಗೆ ಬಲ

ಮುದ್ರಣ ಮಾಧ್ಯಮವು ಸಮಾಜದಲ್ಲಿ ಅರಿವು, ಚಿಂತನೆ ಮತ್ತು ಪ್ರಜ್ಞೆ ರೂಪಿಸುವಲ್ಲಿ ಮಹತ್ವದ ಪಾತ್ರವಹಿಸಿದೆ. ನಾವು ನಿಮಗಾಗಿ ಪ್ರತಿದಿನದ ನಿಖರ ಮತ್ತು ನಿಸ್ಪಕ್ಷಪಾತ ವರದಿ ಮತ್ತು ಮಕ್ಕಳ ಶೈಕ್ಷಣಿಕ ಪ್ರಗತಿಗೆ ಮೌಲ್ಯಯುತ ಲೇಖನಗಳನ್ನು ಹಂಚಿಕೊಳ್ಳುತ್ತಿದ್ದೇವೆ. ಮುದ್ರಣ ಮಾಧ್ಯಮದ ಉಳಿವು ಒಂದು ಸಾಮೂಹಿಕ ಜವಾಬ್ದಾರಿಯಾಗಿದೆ. ಪತ್ರಿಕೆಗಳು ತಮ್ಮ ಕಾರ್ಯ ನೈಪುಣ್ಯತೆಯನ್ನು ಅಭಿವೃದ್ಧಿಪಡಿಸಬೇಕಾದರೆ, ಓದುಗರೂ ಸಹ ಚಂದಾದಾರಿಕೆ, ಸ್ವಯಂಪ್ರೇರಿತವಾಗಿ ಜಾಹೀರಾತು ನೀಡಿ ಬೆಂಬಲಿಸಿ ಇತರರಿಗೂ ಪರಿಚಯಿಸಿ. ಮಕ್ಕಳ ಶೈಕ್ಷಣಿಕ ಪ್ರಗತಿಗೆ ಕೈಜೋಡಿಸಬೇಕಿದೆ. ನಿಮ್ಮ ಸಹಕಾರ ಮತ್ತಷ್ಟು ಉತ್ತಮ ಕಾರ್ಯಗಳಿಗೆ ಸ್ಪೂರ್ತಿ. ಸಸಿಗೆ ನೀರೆರೆಯದಿದ್ದರೆ ಹೂ ನಿರೀಕ್ಷಿಸಲಾಗದು. ಪತ್ರಿಕೆಗೆ ಬೆಂಬಲವಿಲ್ಲದೆ ಸೇವೆಯ ನಿರಂತರತೆ ಕನಸು ಕಾಣಲಾಗದು! ನಿಮ್ಮ ಬೆಂಬಲವೇ ನಮ್ಮ ಕಾಯಕಕ್ಕೆ ಬಲ.

**ಹಂಪಿ ಟೈಮ್ಸ್, ಹೊಸಪೇಟೆ : ಮೊ: 9448633038**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

-: ಸಂಪಾದಕರು :-
ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.


Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

ಒಬ್ಬ ರಾಜಕಾರಣಿಯಾಗಿ, ಮಂತ್ರಿಯಾಗಿ, ಹಣಕಾಸು ತಜ್ಞರಾಗಿ, ಅತ್ಯುತ್ತಮ ಸಂಘಟಕರಾಗಿ, ಮಾನವೀಯ ಗುಣಗಳ ಮೂರ್ತ ರೂಪರಾಗಿ, ಕವಿಯಾಗಿ, ಭಕ್ತಿಭಂಡಾರಿಯಾಗಿ ಬಸವಣ್ಣ ಏರಿದ ಎತ್ತರ ಅನೂಹ್ಯವಾದದ್ದು. ಇಷ್ಟೆಲ್ಲ ಆಗಿಯೂ ಸಮಾಜದಲ್ಲಿ ನಡೆಯುವ ನಿತ್ಯ ಘಟನೆಗಳಿಗೆ ತಮ್ಮ ಅಪೂರ್ವ ಒಳನೋಟಗಳಿಂದ ಜೀವಪರ ನಿಲುವಿನಿಂದ ಪ್ರತಿಕ್ರಿಯಿಸುವ ಸೂಕ್ಷ್ಮ ಮನವನ್ನು ಸದಾ ಎಚ್ಚರವಾಗಿ ಇಟ್ಟುಕೂಂಡಿದ್ದರು. ತಮ್ಮ ಅಭಿಜಾತ ಪ್ರತಿಭೆಯಿಂದ ಮಹಾಕಾವ್ಯವನ್ನು ರಚಿಸುವ ಸಾಮರ್ಥ್ಯವಿದ್ದರೂ ಅದರ ಪ್ರಲೋಭನೆಯಿಂದ ದೂರವುಳಿದು ಸಾಮಾನ್ಯರ ಒಳಿತಿಗಾಗಿ, ಅರಿವಿಗಾಗಿ ವಚನ ಮಾರ್ಗದಲ್ಲೇ ಮುನ್ನಡೆದು ಯುಗಪ್ರವರ್ತಕರಾದರು.

# ಕರುಣೆಯ ಗಂಗಾನದಿ – ಬಸವ ದಣ್ಣಾಯಕರು

**ಹಬ್ಬಕ್ಕೆ ತಂದ ಹರಕೆಯ ಕುರಿ**
**ತೋರಣಕ್ಕೆ ತಂದ ತಳಿರ ಮೇಯಿತ್ತು**
**ಕೊಂದಹರೆಂಬುದನರಿಯದೆ**
**ಬೆಂದ ಒಡಲ ಹೊರೆಯ ಹೋಯಿತ್ತು**
**ಅದಂದೆ ಹುಟ್ಟಿತ್ತು ಅದಂದೆ ಹೊಂದಿತ್ತು**
**ಕೊಂದವರುಳಿದರೆ ಕೂಡಲಸಂಗಮ ದೇವ.**

ದಯೆ, ಕರುಣೆ, ಅನುಕಂಪ, ಮಾನವೀಯತೆ ಇತ್ಯಾದಿ ಸಮಾನಾರ್ಥಕ ಪದಗಳ ಈ ಉನ್ನತ ಸದ್ಗುಣ ಜೀವ ಲೋಕವನ್ನು ಪೊರೆಯುತ್ತಿದೆ. ಕಾಲ, ದೇಶ, ಜನಾಂಗ, ಧರ್ಮಗಳ ಭೇದವಿಲ್ಲದೇ ಎಲ್ಲ ಮಾನವರ ಎದೆಯಲ್ಲಿ ಇದು ಸ್ಥಾಯಿಯಾಗಿ ನಿಂತಿದೆ. ಮಾನವ ಪ್ರಾಣಿ ಭೇದವಿಲ್ಲದೇ ಎಲ್ಲರಲ್ಲಿಯೂ ಇದು ಕೆಲವೊಮ್ಮೆ ಸುಪ್ತವಾಗಿ, ಕೆಲವೊಮ್ಮೆ ಬಹಿರಂಗವಾಗಿ ದೃಗ್ಗೋಚರವಾಗುತ್ತದೆ. ಯಾರ ಹೃದಯದಲ್ಲಿ ಇದು ತುಂಬಿ ತುಳುಕುವಂತೆ ಸಮೃದ್ಧವಾಗಿರುತ್ತದೋ ಅಂತಹ ಉನ್ನತ ಚೇತನಗಳು ಮನುಕುಲದ ದಿವ್ಯ ಚೇತನಗಳಾಗಿ ಕಂಡು ಬಂದಿದ್ದಾರೆ. ಜಗತ್ತಿನ ಎಲ್ಲ ಧರ್ಮಗಳೂ, ದಾರ್ಶನಿಕರೂ, ತತ್ವಜ್ಞಾನಿಗಳೂ ಕರುಣೆ ಎಂಬ ಸತ್ವಶಾಲೀ ಗುಣದ ಗುಣಗಾನವನ್ನು ಮಾಡಿ ಅದನ್ನು ಎಲ್ಲರೂ ಅಳವಡಿಸಿಕೊಳ್ಳಬೇಕಾದ ಅವಶ್ಯಕತೆಯನ್ನು ಒತ್ತಿ ಹೇಳಿದ್ದಾರೆ. ಸುಖದ ಸಂಗತಿ ಎಂದರೆ ಒಂದು ಒಳ್ಳೆಯ ಗುಣವನ್ನು ಅಳವಡಿಸಿ ಕೊಂಡರೆ ಅದರ ಜೀವದ ಗೆಳೆಯರಾದ ಇತರ ಗುಣಗಳೂ ಅನಾಯಾಸವಾಗಿ ಬಂದು ಜೊತೆಯಾಗುತ್ತವೆ. ಸತ್ಯ, ಅಹಿಂಸೆ, ಪರೋಪಕಾರ ಎಂಬ ಇತ್ಯಾದಿ ಸಂಗಾತಿಗಳು ಸದಾ ಒಗ್ಗಟ್ಟಿನಿಂದ ಇರುತ್ತವೆ. ವೇದ, ಉಪನಿಷತ್ತುಗಳು, ಬೌದ್ಧ, ಜೈನ, ವೀರಶೈವ ಧರ್ಮಗಳು ದಯಾಗುಣದ ಮಾನವೀಯ ನೆಲೆಯ ಮಹತ್ವವನ್ನು ಸಾರಿ ಹೇಳಿವೆ. ಭಾರತದ ಧಾರ್ಮಿಕ ಬದುಕಿನ ಮೂಲಭೂತ ಅಂಶವೇ ಅಗಣಿತ ಗುಣದ ಕೇಂದ್ರ ವಾಗಿರುವ ದಯಾಗುಣ ವಾಗಿದೆ. ಇದೆಲ್ಲದಕ್ಕೂ ಶಿಖರಪ್ರಾಯವಾಗಿರುವುದು 'ದಯವೇ ಧರ್ಮದ ಮೂಲ' ಎಂಬ ಬಸವ ದಣ್ಣಾಯಕರ ಎದೆಯಾಳದ ದೇವನುಡಿ ಯಾಗಿದೆ.



ಬಿ.ಎಂ.ರಾಜಶೇಖರ, ಶಿಕ್ಷಕರು
M:9900705323

Scan For Digital Colourful
HAMPI TIMES E-paper

ಒಂದು ತತ್ವವನ್ನು ಹೇಳಲು, ಜನರ ಮನ ದಾಳದಲ್ಲಿ ಸ್ಥಿರವಾಗಿ ನೆಲಸು ವಂತೆ ಮಾಡಲು ರೂಪಕ ಗಳನ್ನು ಬಳಸು ವುದು ನಮ್ಮಲ್ಲಿ ಪೂರ್ವ ದಿಂದಲೂ ಬೆಳೆದು ಬಂದಿ ದೆ. ಕಥನಗಳ ಮೂಲಕ ಹೇಳಿದ ಸಂಗತಿ ಗಳು ಶಾಶ್ವತವಾಗಿ ನೆಲೆ ಗೊಳ್ಳು ವುದು ಇದರ ಹಿಂದಿರುವ ಪರಿಣಾಮ ಕಾರೀ ತಂತ್ರವಾಗಿದೆ. ಉಪ ನಿಷತ್ತಿನ ಕಥೆಗಳು, ರಾಮಾಯಣ, ಮಹಾ ಭಾರತದಲ್ಲಿರುವ ಹೇರಳ ಉಪಕಥೆಗಳು ಇದೇ ಉದ್ದೇಶಕ್ಕಾಗಿ ರಚನೆಯಾಗಿವೆ. ರಾಮಾಯಣದ ಜನನಕ್ಕೆ ಕಾರಣವಾದದ್ದೇ ಕರುಣಾ ರಸ ಎನ್ನುವುದು ಇದರ ಮಹತ್ವವನ್ನು ತೋರಿಸುತ್ತದೆ. ಆದಿಕವಿ ಮಹರ್ಷಿ ವಾಲ್ಮೀಕಿಯ ಹೃದಯದಲ್ಲಿ ಮಡುಗಟ್ಟಿದ್ದ ಕರುಣೆ, ಬಾಣದೇಟಿಗೆ ಸಿಲುಕಿ ಆಕ್ರಂದನ ಮಾಡುತ್ತಾ ಧರೆಗುರುಳಿದ ಪಕ್ಷಿಯನ್ನು ಕಾಣುತ್ತಿದ್ದಂತೆ ಕಟ್ಟೆಯೊಡೆದು ತಮಸಾ ನದಿಯಂತೆ ಹರಿಯಿತು. ಅಂದು ಹರಿದ ಕರುಣಾರಸ ಇಂದಿನವರೆಗೂ ಮಾನವ ಕುಲವನ್ನು ಪೊರೆಯುತ್ತಿದೆ, ಆವರಿಸಿದೆ. ವಾಲ್ಮೀಕಿಯ ಕ್ಷಮೆಯಿಂದ ಬೇಟೆಗಾರ ಪಾವನನಾದರೆ, ದಯಾಗುಣದ ಮಹಾಪೂರದಿಂದ ಕ್ರೌಂಚ ಪಕ್ಷಿ ಜೀವ ಪಡೆಯಿತು. ಜೀವಜಗತ್ತಿನ ಎಲ್ಲೆಡೆಯೂ ಒಳಿತನ್ನೇ ಮಾಡುವ ದಯೆ, ಕ್ಷಮೆ, ಸತ್ಯ, ಅಹಿಂಸೆ, ಪರೋಪಕಾರ ಎಂಬ ಸಂಜೀವಿನೀ ಗುಣಗಳು ಹೊಸ ಹೊಸ ರೂಪ, ಕಥೆಗಳಿಂದ ಮರುಹುಟ್ಟು ಪಡೆಯುತ್ತಲೇ ಲೋಕೋಪಕಾರ ಮಾಡುತ್ತಿವೆ.

ಕನ್ನಡದ ದಂಡನಾಯಕ ಬಸವರಸರು ಇದನ್ನು ತುಂಬ ಅದ್ಭುತವಾಗಿ ನಿರ್ವಹಿಸಿದ್ದಾರೆ. ಒಂದು ಸುಂದರ ಚಿತ್ರದೊಂದಿಗೆ ಕಣ್ಣಿಗೆ ಕಟ್ಟುವ ಹಾಗೆ ಚಿತ್ರಿಸುತ್ತಾರೆ. ಬಸವಣ್ಣ ಎಂಬ ಕನ್ನಡದ ಶ್ರೇಷ್ಠಕವಿಯ ಎದೆಯಿಂದ ಬೀಸಿದ ತಂಗಾಳಿ ನಮ್ಮೆದೆಯಾಳದಲ್ಲಿರುವ ರಸ ಸರೋವರವನ್ನು ಮಿಡಿದು ಜೀವಂತವಾಗುವಂತೆ ಮಾಡುತ್ತದೆ. ಆ ರಸ ಪ್ರವಾಹದಿಂದ ಓದುಗನೇ ಕವಿಯಾಗುವಂತೆ ಮಾಡುವ, ಉನ್ನತ ಭಾವಗಳು ಉಕ್ಕುವಂತೆ ಮಾಡುವ ಅಸಂಭವ ಸಂಭವಿಸುವಂತೆ ಮಾಡುತ್ತಾರೆ. ನೂರಾರು ಪುಟಗಳಲ್ಲಿ ಹೇಳುವ ತತ್ವವನ್ನು ನಾಲ್ಕಾರು ಸಾಲುಗಳಲ್ಲಿ ಹೇಳಿ ಕಾವ್ಯದ ಶಕ್ತಿಯನ್ನು ನಮ್ಮೆದುರು ಅನಾವರಣಗೊಳಿಸುತ್ತಾರೆ.

" ಹಬ್ಬಕ್ಕೆ ತಂದ ಹರಕೆಯ ಕುರಿ " ಎನ್ನುವ ಮೊದಲ ಸಾಲಿನಲ್ಲಿ ಹಬ್ಬದ ಸಂಭ್ರಮವನ್ನು ಹರಕೆಯ ಕುರಿಯ ಅಂತ್ಯದ ದಾರುಣ ಸಂಗತಿಗಳೆರೆಡನ್ನೂ ಒಮ್ಮೆಗೇ ಮುಖಾಮುಖಿಯಾಗಿಸುತ್ತಾರೆ. ಪ್ರತಿದಿನದ ನಿರಂತರವಾದ ದುಡಿಮೆಯ ಮಧ್ಯೆ ಬರುವ ಮುದಗೊಳಿಸುವ ಹಬ್ಬ ಸಂತೋಷವನ್ನು ನೀಡಿ ಸಂಪ್ರದಾಯ ಪರಂಪರೆಗಳನ್ನು ಎತ್ತಿ ಹಿಡಿಯುತ್ತದೆ. ಈ ಸಂತೋಷವನ್ನು ಹೆಚ್ಚಿಸಲು ಕುರಿಯು ಆಹಾರದ ರೂಪದಲ್ಲಿ ಜೀವಂತವಾಗಿ ನಿಲ್ಲುತ್ತದೆ. ಯಾವುದೋ ಒಂದು ತಮ್ಮ ಇಷ್ಟದೈವಕ್ಕೆ ಹರಕೆ ತೀರಿಸುವ ಸಲುವಾಗಿ ಕುರಿಯನ್ನು ಬಲಿಕೊಡುವ ಹಿಂಸಾತ್ಮಕ ಘಟನೆಯೂ ಸದ್ಯದಲ್ಲೇ ಸಂಭವಿಸಲಿದೆ. ಬಹುಶ: ಬಸವಣ್ಣ ಯಾವುದೊ ಕಾರ್ಯಾರ್ಥ ಬೀದಿಯಲ್ಲಿ ಹೋಗುತ್ತಿರುವಾಗ ಈ ದೃಶ್ಯ ಆತನ ಮೃದು ಹೃದಯದಲ್ಲಿ ಅಲ್ಲೋಲ ಕಲ್ಲೋಲವನ್ನು ಉಂಟು ಮಾಡಿತು. ಹಿಂಸಾತ್ಮಕ ಹರಕೆಗಳು ಮೌಢ್ಯ ಎಂಬ ಅರಿವು ಬಸವಣ್ಣನಿಗೆ ಜನ್ಮಜಾತವಾಗಿಯೇ ಬಂದಿತ್ತು. ಮಾನವ ಜೀವಕ್ಕೇ ಬೆಲೆಯಿರದ ಆ ಕಾಲದಲ್ಲಿ ಒಂದು ಕುರಿಯ ಪ್ರಾಣಹರಣವಾಗುವುದು ಬಸವಣ್ಣನ ಮನವನ್ನು ಕಲಕಿತ್ತು. ಸೋಜಿಗವೆಂದರೆ ತನ್ನ ಪ್ರಾಣ ಹೋಗುವುದೆಂಬ ಸಂಗತಿ ಆ ಕುರಿಗೆ ಸ್ವಲ್ಪವೂ ತಿಳಿದಿಲ್ಲ. ಅದು ತನ್ನ ಸುತ್ತ ನಡೆಯುತ್ತಿರುವ ಯಾವ ಸಂಗತಿಗೂ ತಲೆಕೆಡಿಸಿಕೊಳ್ಳದೆ 'ಬೆಂದ ಒಡಲ ಹೊರೆಯ' ಹೋಗುತ್ತದೆ. ಅಲಂಕಾರಕ್ಕೆಂದು ತಂದ, ಸುತ್ತ ಹರಡಿದ್ದ ಮಾವು, ಬೇವು, ತೆಂಗು ಇತ್ಯಾದಿ ಚಿಗುರು ಸೊಪ್ಪುಗಳನ್ನು ಸವಿಯುವುದರಲ್ಲಿ, ತನ್ನ ಹಸಿದ ಹೊಟ್ಟೆ ತುಂಬಿಸಿಕೊಳ್ಳುವುದರಲ್ಲಿ ತನ್ಮಯವಾಗಿ ಮೈಮರೆತಿದೆ. ಇದು ಬಸವಣ್ಣ ಎಂಬ ಕವಿ ಹೃದಯಿಯ ಸಂಕಟವನ್ನು ಹೆಚ್ಚಿಸಿತು. ಬಹುತೇಕ ಆತನ ಹೃದಯದಲ್ಲಿನ ಕರುಣಾರಸ ಕಣ್ಣೀರಿನ ರೂಪದಲ್ಲಿ ಹೊರ ಬಂದಿರಲೇಬೇಕು, ಇಲ್ಲವಾದರೆ ಇಂತಹ ಶ್ರೇಷ್ಠ ಕವಿತೆ ಹೊರಬರಲು ಸಾಧ್ಯವೇ ಇಲ್ಲ. ಒಬ್ಬ ಮಾನವನ ಎದೆ ಎಷ್ಟು ಮಿದುವಾಗಬಲ್ಲದು ಎಂಬುದರ ಪರಾಕಾಷ್ಠೆ ಈ ಕವಿತೆಯ ಜೀವಾಳವಾಗಿದೆ. ಇದೇ ಈ ಕವಿತೆಯ ಅಂತ: ಸತ್ವವೂ ಆಗಿದೆ.



ಸತ್ಯ, ಅಹಿಂಸೆ, ದಯೆ, ಪರೋಪಕಾರ ಎಂಬ ಗುಣಗಳು ಸದಾ ಜೊತೆಯಲ್ಲಿಯೇ ಇರುತ್ತವೆ. ಒಂದರ ಹೊರತು ಇನ್ನೊಂದು ಪೂರ್ಣವಾಗಲಾರದು ಎಂಬ ದಿವ್ಯ ಸಂದೇಶವನ್ನು ಬಸವಣ್ಣ ಈ ಕವಿತೆಯ ಮೂಲಕ ಸಮರ್ಥವಾಗಿ ಸಾಧಿಸಿದ್ದಾರೆ. ವಚನ ಸಾಹಿತ್ಯವಷ್ಟೇ ಅಲ್ಲದೆ ಇಡೀ ಕನ್ನಡ ಕಾವ್ಯದಲ್ಲೇ ಇದೊಂದು ಶ್ರೇಷ್ಠ ಕವಿತೆ ಎನಿಸಿಕೊಳ್ಳುತ್ತದೆ. ಶ್ರೇಷ್ಠ ತತ್ವವೊಂದನ್ನು ಯಾವ ಭಾರವೂ ಇಲ್ಲದೆ ಅತ್ಯಂತ ಸರಳವಾಗಿ, ಆರ್ದ್ರವಾಗಿ ಓದುಗರಿಗೆ ದಾಟಿಸಿದ್ದಾರೆ. ಜೀವಪರವಾದ ಕಾವ್ಯಗುಣವನ್ನು ಹೊಂದಿದ ಒಳ್ಳೆಯ ಕವಿತೆಗೆ ಇದು ಉದಾಹರಣೆಯಾಗಿ ನಿಂತಿದೆ. ಕಾಲದ ಪರೀಕ್ಷೆಯಲ್ಲೂ ದಾಟಿ ಇಂದಿಗೂ ಮತ್ತೆ ಮತ್ತೆ ನಮ್ಮನ್ನು ತನ್ನೆಡೆಗೆ ಸೆಳೆದು ಚರ್ಚಿಸಲು, ವಿಶ್ಲೇಷಿಸಲು, ಮಾಗುವಂತೆ ಮಾಡಲು ಪ್ರೇರೇಪಿಸುತ್ತದೆ.

ಅದಂದೇ ಹುಟ್ಟಿತ್ತು ಅದಂದೇ ಹೊಂದಿತ್ತು ಎನ್ನುವ ಮೂಲಕ ಸ್ಥಾವರದ ನಶ್ವರತೆಯನ್ನು ನಮ್ಮೆದುರು ಮತ್ತೆ ಮತ್ತೆ ತರುತ್ತಾರೆ. ಮೂರ್ತಿಯಾದುದೆಲ್ಲವೂ ಪ್ರಳಯವಾಗಲೇಬೇಕು ಎಂಬ ಎಚ್ಚರವನ್ನು ಇಟ್ಟುಕೊಂಡೂ, ಇರುವವರೆಗೆ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಕರೆ ನೀಡುತ್ತಾರೆ. ಕೊಂದವರು ಳಿದರೇ ಕೂಡಲ ಸಂಗಮ ದೇವಾ ಎನ್ನುತ್ತಾ ಹಿಂಸಾತ್ಮಕ ಜೀವಹತ್ಯೆಯ ದಾರು ದಾರುಣ ಮನಸ್ಥಿತಿಯಿಂದ ಹೊರಬಂದು ಅಹಿಂಸೆಯ ದಾರಿಯಲ್ಲಿ ಸಾಗುವಂತೆ ಸೂಚಿಸುತ್ತಾರೆ. ಪರಂಪರೆಯಿಂದ ಬಂದ ಎಲ್ಲ ಬಗೆಯ ಹಿಂಸಾತ್ಮಕ ಹರಕೆಗಳನ್ನು ನಿರಾಕರಿಸುತ್ತಾ ದಯಾಗುಣದ ಮಹತ್ವವನ್ನು ಸಾರುತ್ತಾರೆ. ಅಂತಿಮವಾಗಿ ದಯೆ, ಕರುಣೆಗಳ ಗಂಗಾ ನದಿಯಲ್ಲಿ ನಮ್ಮನ್ನು ಮೀಯುವಂತೆ ಮಾಡಿ ಪಾವನರನ್ನಾಗಿಸಿದ್ದಾರೆ.

ಇಡೀ ವಚನದ ಶಕ್ತಿಯೇ ಕೊನೆಯ ಸಾಲು. ಇನ್ನೊಂದು ಜೀವವನ್ನು ಹತ್ಯೆ ಮಾಡುವವರು ತಾವೂ ಮುಂದೊಮ್ಮೆ ಅಳಿಯುವವರೇ ಎಂಬುದನ್ನು ಇನ್ನೊಂದು ಪ್ರಾಣಿ ಅಥವಾ ಮಾನವ ಯಾರನ್ನೇ ಆಗಲಿ ಹತ್ಯೆ ಮಾಡುವವರು ಆ ಕ್ಷಣದಲ್ಲಿ ಶಕ್ತಿ ಸಾಮರ್ಥ್ಯದಲ್ಲಿ ಮೇಲ್ಮೆಯನ್ನು ಸಾಧಿಸಿರುತ್ತಾರೆ. ತಮ್ಮ ಬೌದ್ಧಿಕ ಚಾಣಾಕ್ಷತೆ, ದೈಹಿಕ ಶಕ್ತಿಯಲ್ಲಿ ಉನ್ನತ ಸ್ಥಿತಿಯಲ್ಲಿರುತ್ತಾರೆ. ಆದರೆ ಈ ಯಾವುದೂ ಆತನನ್ನು ಶಾಶ್ವತವಾಗಿ ಉಳಿಸಲಾರದು. ಕೊನೆಗೂ ಉಳಿಯುವುದು ಮಾನವೀಯವಾದ ಸಾತ್ವಿಕ ಗುಣಗಳು ಹಾಗೂ ಅವುಗಳನ್ನು ಅಳವಡಿಸಿಕೊಂಡು ಎತ್ತರದ ಸ್ಥಾನಗಳಿಸಿದ ವ್ಯಕ್ತಿಯ ವ್ಯಕ್ತಿತ್ವವೊಂದೇ ಎನ್ನುವುದು ಇಲ್ಲಿ ಧ್ವನಿಪೂರ್ಣವಾಗಿ ವ್ಯಕ್ತವಾಗಿದೆ.

ಒಬ್ಬ ರಾಜಕಾರಣಿಯಾಗಿ, ಮಂತ್ರಿಯಾಗಿ, ಹಣಕಾಸು ತಜ್ಞರಾಗಿ, ಅತ್ಯುತ್ತಮ ಸಂಘಟಕರಾಗಿ, ಮಾನವೀಯ ಗುಣಗಳ ಮೂರ್ತ ರೂಪರಾಗಿ, ಕವಿಯಾಗಿ, ಭಕ್ತಿಭಂಡಾರಿಯಾಗಿ ಬಸವಣ್ಣ ಏರಿದ ಎತ್ತರ ಅನೂಹ್ಯವಾದದ್ದು. ಇಷ್ಟೆಲ್ಲ ಆಗಿಯೂ ಸಮಾಜದಲ್ಲಿ ನಡೆಯುವ ನಿತ್ಯ ಘಟನೆಗಳಿಗೆ ತಮ್ಮ ಅಪೂರ್ವ ಒಳನೋಟಗಳಿಂದ ಜೀವಪರ ನಿಲುವಿನಿಂದ ಪ್ರತಿಕ್ರಿಯಿಸುವ ಸೂಕ್ಷ್ಮ ಮನವನ್ನು ಸದಾ ಎಚ್ಚರವಾಗಿ ಇಟ್ಟುಕೂಂಡಿದ್ದರು. ತಮ್ಮ ಅಭಿಜಾತ ಪ್ರತಿಭೆಯಿಂದ ಮಹಾಕಾವ್ಯವನ್ನು ರಚಿಸುವ ಸಾಮರ್ಥ್ಯವಿದ್ದರೂ ಅದರ ಪ್ರಲೋಭನೆಯಿಂದ ದೂರವುಳಿದು ಸಾಮಾನ್ಯರ ಒಳಿತಿಗಾಗಿ, ಅರಿವಿಗಾಗಿ ವಚನ ಮಾರ್ಗದಲ್ಲೇ ಮುನ್ನಡೆದು ಯುಗಪ್ರವರ್ತಕರಾದರು. ಒಬ್ಬ ಕವಿ ತನ್ನ ಅನುಭವದ ಪ್ರತಿಭೆಯ ಶೇಕಡಾ ಹತ್ತನ್ನು ಮಾತ್ರ ರಚಿಸಬಲ್ಲ ಎಂಬ ಹಳೆಯ ಮಾತೊಂದಿದೆ, ಹಾಗಾದರೆ ಇಡೀ ಬಸವಣ್ಣ ಹೇಗಿರಬಹುದು? ಅದಕ್ಕಾಗಿಯೇ ಆತ ವಿಶ್ವಗುರು.

# ಅಕ್ಷಯ ತೃತೀಯ ಮತ್ತು ಭಾವ ಸಂಬಂಧದ ಬಸವಣ್ಣ

ವೈಶಾಖ ಮಾಸ ಶುಕ್ಲಪಕ್ಷ ತದಿಗೆಯ ದಿನವನ್ನು ಅಕ್ಷಯ ತೃತೀಯ ಎಂದು ಆಚರಿಸುವ ವಾಡಿಕೆ. ಕ್ಷಯ ಎಂದರೆ ನಾಶವಾಗುವದು. ಅಕ್ಷಯ ಎಂದರೆ ನಾಶವಾಗದೇ ಇರುವುದು. ಅಂದರೆ ವೃದ್ಧಿಸುವುದು ಎಂದರ್ಥ. ಈ ದಿನ ಅದಾವ ಕಾರ್ಯವನ್ನು ಕೈಗೊಂಡರೂ ಅದು ವೃದ್ಧಿಸುತ್ತಲೇ ಇರುತ್ತದೆ. ಹಾಗಾಗಿ ಯಾವುದೇ ಶುಭ ಕಾರ್ಯಕ್ಕೆ ಮಂಗಳಕರವಾದುದು.ಅಂತೆಯೇಅಕ್ಷರಾಭ್ಯಾಸ,ಮದುವೆ,ಉಪನಯನ, ಗೃಹಪ್ರವೇಶ, ಹೊಸ ವ್ಯವಹಾರ ಆರಂಭ, ಬಂಗಾರ ಖರೀದಿ ಎಲ್ಲದಕ್ಕೂ ಸುಮುಹೂರ್ತದ, ಪಂಚಾಂಗಶುದ್ಧಿಯ ದಿನವೆಂದು ನಂಬಲಾಗಿದೆ. ಪೌರಾಣಿಕವಾಗಿ ಹಿನ್ನೆಲೆಯಲ್ಲಿ ಅವಲೋಕಿಸುವುದಾದರೆ, ಮಹರ್ಷಿ ವೇದವ್ಯಾಸರು ಗಣಪತಿಯಿಂದ ಮಹಾಭಾರತ ಮಹಾಕಾವ್ಯ ಬರೆಯಲಾರಂಭಿಸಿದ ದಿನ. ಶ್ರೀವಿಷ್ಣು ಪರಶುರಾಮನಾಗಿ ಅವತಾರವೆತ್ತಿದ ದಿನ. ಶ್ರೀಕೃಷ್ಣನ ಅಣ್ಣ ಬಲರಾಮ ಜನ್ಮಿಸಿದ ದಿನ. ಪಾಂಡವರಿಗೆ ಶ್ರೀಕೃಷ್ಣನು ಅಕ್ಷಯ ಪಾತ್ರೆಯನ್ನಿತ್ತ ಸುದಿನ. ಪವಿತ್ರ ಗಂಗಾಮಾತೆ ನದಿಯಾಗಿ ಧರೆಗಿಳಿದ ದಿನ. ಕುಬೇರನು ಮಹಾಲಕ್ಷ್ಮಿಯನ್ನು ಪೂಜಿಸುವ ಶುಭ ದಿನ. ತ್ರೇತಾಯುಗ ಆರಂಭವಾದ ದಿನ. ಸೀತಾಮಾತೆ ಅಗ್ನಿ ಪರೀಕ್ಷೆಯಿಂದ ತಾನು ಪರಿಶುದ್ಧಳೆಂದು ತೋರಿಸಿಕೊಟ್ಟ ದಿನ. ಮತ್ತು ರಾವಣ ತನ್ನಣ್ಣ ಕುಬೇರನಿಂದ ಪಡೆದಲಂಕೆಯನ್ನು ಸ್ವರ್ಣ ಲಂಕೆಯನ್ನಾಗಿಸಲು ಭೂಮಿ ಪೂಜೆ ಮಾಡಿದ ದಿನ. ಇರಲಿ.

12ನೇ ಶತಮಾನದ ಮಹಾಪುರುಷ ಜಗಜ್ಯೋತಿ ಬಸವೇಶ್ವರರು ಜನಿಸಿದ್ದು ಇದೇ ಅಕ್ಷಯ ತೃತೀಯಾ ದಿನದಂದು ಅಂತೆಯೇ ದಿನವನ್ನು "ಬಸವ ಜಯಂತಿ" ಎಂದು ಕೂಡಾ ಆಚರಿಸುತ್ತೇವೆ.




ಲಕುಮಿಸುತ ಸಾರವಾಡ
ಮೊ: 9449598373

Scan For Digital Colourful
HAMPI TIMES E-paper

ಬಸವಣ್ಣನವರ ಚರಿತ್ರೆಯನ್ನು ಅರಿಯದವರಾರೂ ಇಲ್ಲ. ಆದರೂ ಸಂಕ್ಷಿಪ್ತದಲ್ಲಿ ಹೇಳುವುದಾದಲ್ಲಿ ಇವರು ವಿಜಯಪುರ ಜಿಲ್ಲೆಯ ಬಾಗೇವಾಡಿ ತಾಲೂಕಿನ ಇಂಗಳೇಶ್ವರ ಎಂಬ ಗ್ರಾಮದ ಬ್ರಾಹ್ಮಣ ಕುಲದಲ್ಲಿ ಜನ್ಮಿಸಿದರು. ಉಪನಯನವನ್ನು ತಿರಸ್ಕರಿಸಿ ಲಿಂಗೋಪಾಸಕ ರಾದರು. ಇವರ ಜಾಣ್ಮೆಗೆ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿ ಪದವಿ ದೊರೆಯಿತು. ಪಾರಮಾರ್ಥಿಕ ಜ್ಞಾನ ಇವರ ಮೇರು ವ್ಯಕ್ತಿತ್ವವಾಗಿ ಬೆಳೆಯಿತು. ಮೌಢ್ಯತೆ, ಮೂಢನಂಬಿಕೆ, ಜಾತಿ ಬೇಧಗಳ ಸಂಕೋಲೆ ಗಳಿಂದ ಹೊರಬರಲು, ಸಮಾನತೆಯ ಬೀಜ ಬಿತ್ತಲು ಕಾರಣರಾದರು. ಸಮಾಜಮುಖಿ ದಾರ್ಶನಿಕರಾದುದಲ್ಲದೇ ವಚನಗಳ ಮುಖಾಂತರ ಜನತೆಗೆ ತಿಳುವಳಿಕೆ ಬಿಂಬಿಸಿದರು. ಅಲ್ಲಮಪ್ರಭು ಅವರ ನೇತೃತ್ವದಲ್ಲಿ ಅನುಭವ ಮಂಟಪ ಮುಖಾಂತರ ಜನತೆಗೆ ಸಮಾನತೆ ಮತ್ತು ಧಾರ್ಮಿಕ ಸಂದೇಶ ಬೀರಲು ಶ್ರಮಿಸಿದರು. ಅಕ್ಕಮಹಾದೇವಿ, ಮಾದಾರ ಚೆನ್ನಯ್ಯ, ಹರಳಯ್ಯ, ಅಂಬಿಗರ ಚೌಡಯ್ಯ ಇನ್ನು ಅನೇಕ ಶರಣರು ಇವರನ್ನು ಹಿಂಬಾಲಿಸಿ ಶರಣ ಸಾಹಿತ್ಯ ಮುಖೇನ ಸಾಮಾಜಿಕ ಧಾರ್ಮಿಕ ಸಮಾನತೆಗಾಗಿ ಪ್ರಚಾರ ಮಾಡಿದರು. ಮುಂದೊಮ್ಮೆ ಧಾರ್ಮಿಕ ಕ್ರಾಂತಿಯಾಗಿ ಕೊನೆಗಾಲದಲ್ಲಿ ಕೂಡಲ ಸಂಗಮನಾಥನ ಸನ್ನಿಧಿಗೆ ಬಂದು ತಮ್ಮನ್ನು ತಾವು ಸಂಗಮನಾಥನಿಗೆ ಅರ್ಪಿಸಿಕೊಂಡದ್ದು ಈಗ ಇತಿಹಾಸ.

ಇಲ್ಲಿ ಅವರ ಚರಿತ್ರೆ ಎಷ್ಟು ಮುಖ್ಯವೋ ಅಷ್ಟೇ ಅವರ ತತ್ವ ಮುಖ್ಯ ವಾಗುತ್ತವೆ. ಈ ಮಹಾನ್ ಸಾಧಕರ ಬಗ್ಗೆ ಅನೇಕ ಗ್ರಂಥಗಳು ಪ್ರಪಂಚದ ನಾನಾ ಭಾಷೆಗಳಲ್ಲಿ ಪ್ರಕಟ ಗೊಂಡಿವೆ. ವಾಸ್ತವವಾಗಿ ಬಸವಣ್ಣನವರ ಬಸವ ಜಯಂತಿಯನ್ನು ಹೇಗೆ ಆಚರಿಸಲಾಗುತ್ತದೆ? ಎಂಬುದೂ ಕೂಡಾ ಮಹತ್ವದ್ದಾಗಿರುತ್ತದೆ. ಅವರ ಪುತ್ಥಳಿಗೆ, ಫೋಟೋಗೆ ಹಾರ ಹಾಕಿ, ಮರವಣಿಗೆ ಮಾಡಿ, ಸಿಹಿ ಹಂಚಿ, ಅವರ ನಾಲ್ಕು ವಚನದೊಡನೆ ಭಾಷಣ ಮಾಡಿ ಮರುದಿನ ಮಾಧ್ಯಮದಲ್ಲಿ ಪ್ರಚಾರ ಗಿಟ್ಟಿಸಿಕೊಂಡರೆ ಆಯಿತು ಎನ್ನುವ ಮಟ್ಟಿಗೆ ಬಂದಿದೆ.



ಬಸವಣ್ಣನವರನ್ನು ನಾವು ನೋಡುವ ದೃಷ್ಟಿಯಲ್ಲಿದೆ. ಅವರು ಒಬ್ಬ ನಿಷ್ಠಾವಂತ ರಾಜಕಾರಿಣಿ, ಕ್ರಾಂತಿಕಾರಿ, ಧರ್ಮ ಪ್ರತಿಪಾದಕ, ಸಾಹಿತಿ, ತತ್ವಜ್ಞಾನಿ, ಅದ್ಯಾತ್ಮಿಕ ಸಾಧಕ. ಮಾನವತಾವಾದಿ ಹೀಗೆ ಅವರನ್ನು ಧನಾತ್ಮಕ ಮತ್ತು ದೈವತ್ವದ ಮನದಿಂದ ನೋಡಿದರೆ ಒಬ್ಬೊಬ್ಬರಿಗೆ ಒಂದೊಂದು ರೀತಿ ಕಾಣುತ್ತಾರೆ.

**"ಇಬ್ಬರು ಮೂವರು ದೇವರೆಂದು**
**ಉಬ್ಬಿ ಮಾತನಾಡಬೇಡ**
**ಒಬ್ಬನೇ ಕಾಣಿರೋ**
**ಇಬ್ಬರೆಂದು ಹುದುನೋಡಾ**
**ಕೂಡಲಸಮಗಮದೇವನಲ್ಲದಿಲ್ಲೆಂದಿತ್ತು ವೇದ"**

ವೇದೋಪನಿಷತ್ ಗಳಲ್ಲಿ ಹೇಳಿದಂತೆ ದೇವ ಒಬ್ಬನಿದ್ದಾನೆ, ಅವನ ಸ್ವರೂಪಗಳನ್ನು ಬೇರೆ ಬೇರೆ ಹೆಸರಿನಿಂದ ಕರೆಯುತ್ತಾರೆ.

**"ನಾನು ಅನ್ನುದೆನೆನು? ನೀನು ಅನ್ನುದೆನೆನು?**
**ಆತ್ಮವೇನು? ಶಿವನೇನು?**
**ಆತ್ಮವನು ತಿಳಿದರೆ, ಶಿವನು ಅರಿತಂತೆಯೇ;**
**ಆತ್ಮಶುದ್ಧಿ ಅಂದರೆ ಶಿವಸನ್ನಿಧಿ;**
**ಕೂಡಲಸಂಗಮದೇವನೇ, ಆತ್ಮವೇ ನಿನ್ನ ಸ್ಥಿತಿ."**

ಈ ವಚನದಲ್ಲಿ ಆತ್ಮವನ್ನರಿತರೆ ಶಿವದರ್ಶನ ಸಾಧ್ಯ ಎನ್ನುವ ಇಂಗಿತವನ್ನು ಸಾರುತ್ತದೆ. ಇದೇ ತತ್ವವನ್ನು ಆದಿ ಶಂಕರಾಚಾರ್ಯರು "ಅಹಂ ಬ್ರಹ್ಮಾಸ್ಮೀ" "ಶಿವೋಹಂ" ಎಂದು ತಿಳಿಸಿದ್ದಾರೆ. ಹಾಗಾಗಿ ಬಸವಣ್ಣನವರು ಒಬ್ಬ ಅದ್ವೈತ ಸಿದ್ಧಾಂತ ಸಾಧಕರು ಎನಿಸಿಕೊಳ್ಳುತ್ತಾರೆ. "ಕಳಬೇಡ ಕೊಲಬೇಡ" "ದಯವೇ ದರ್ಮದ ಮೂಲ" "ಅಯ್ಯಾ ಎಂದರೆ ಸ್ವರ್ಗ" "ನಿಮ್ಮ ನಿಮ್ಮ ವ್ಂನ್ವ್-ತ್ನ್ವ್ ಸಂತೈಸಿಕೊಳ್ಳಿ" "ಹಂಚಿ ಉಂಡರೆ ಹಸಿವಿಲ್ಲ" ಎಂದು ಮುಂತಾದ ವಚನಗಳಲ್ಲಿ ಸಾಮಾಜಿಕ ಜೀವನ ಮೌಲ್ಯಗಳನ್ನು ವೃದ್ಧಿಸುವ ನೈತಿಕ ಉಪದೇಶದ ಸಂದೇಶಗಳನ್ನು ಸಾರಿದ್ದಾರೆ.

ಜತೆಗೆ ಸಮಾಜದ ಮೌಢ್ಯ ಆಚರಣೆಗಳಂತಹ ಅಂಕುಡೊಂಕಗಳನ್ನು ಕಟುವಾದ ಶಬ್ದಗಳಿಂದ ಟೀಕಿಸಿದ್ದು ಉಂಟು. ಹಾಗಾಗಿ ಜಾತಿ ಮತ ಪಂಥಗಳ ಹೊರತಾಗಿ ನೈತಿಕವಾಗಿ, ಸಾಮಾಜಿಕವಾಗಿ, ಮತ್ತು ಧಾರ್ಮಿಕವಾಗಿ ಮಾನವೀಯ ಮೌಲ್ಯಗಳನ್ನು ಹೆಚ್ಚಿಸಿ ನಿಸ್ವಾರ್ಥತೆಯಿಂದ ಸದೃಢ ಸಮಾಜದ ಬೆಳವಣಿಗೆಗೆ ಕಾರಣರಾದವರು ಸಾಧಕರೆನಿಸಿ ಕೊಳ್ಳುತ್ತಾರೆ.

ಒಬ್ಬ ಮಹಾನ್ ಸಾಧಕರಾದವರು ಯಾವ ಜಾತಿಯಲ್ಲೇ ಜನಿಸಲಿ, ಅವರ ಉದ್ದೇಶ ಮಾನವ ಕುಲಕೋಟಿಯ ಉದ್ಧಾರ ಮತ್ತು ಮಾನವೀಯತೆಯೇ ಆಗಿರುತ್ತದೆ. ಈ ನಿಟ್ಟಿನಲ್ಲಿ ಹೇಳಬೇಕೆಂದರೆ ಮಂತ್ರಾಲಯ ಶ್ರೀ ರಾಘವೇಂದ್ರ ಸ್ವಾಮಿಗಳು, ಶಿರಡಿ ಶ್ರೀ ಸಾಯಿ ಬಾಬಾ, ಆದಿ ಗುರು ಶ್ರೀ ಶಂಕರಾಚಾರ್ಯರು, ಅಷ್ಟೇ ಯಾಕೆ, ಇತ್ತೀಚಿನ ತುಮಕೂರಿನ ಸಿದ್ಧಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮಿಗಳು, ಕೊಟ್ಟೂರು ಮಹಾಸಂಸ್ಥಾನ ಮೂಲ ಪೀಠದ ಜಗದ್ಗುರು ಸಂಗನಬಸವ ಮಹಾಸ್ವಾಮಿಗಳು, ಕೊಪ್ಪಳದ ಶ್ರೀ ಗವಿಸಿದ್ಧೇಶ್ವರ ಸ್ವಾಮಿಗಳು, ವಿಜಯಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಸ್ವಾಮಿಗಳು, ಕನ್ನೂರ ಶಾಂತಿ ಕುಟೀರದ ಶ್ರೀ ಸ.ಸ. ಗಣಪತರಾವ ಮಹಾರಾಜರು, ಹೀಗೆ ಹೆಸರಿಸುತ್ತ ಹೋದರೆ ಪಟ್ಟಿ ಬೆಳೆಯುತ್ತದೆ. ಇವರಾರೂ ಒಂದು ಜಾತಿ, ಪಂಗಡ ಗಳಿಗೆ ಸೀಮಿತರಲ್ಲ. ಇವರೆಲ್ಲ ಸರ್ವ ಜಾತಿ ಧರ್ಮಗಳಿಗೆ ಸಮಾನರು. ಇವರ ತತ್ವಗಳೆಲ್ಲ ಮಾನವನ ಉದ್ಧಾರಕ್ಕಾಗಿ ಎಂಬುದನ್ನು ನಾವೆಲ್ಲ ಅರಿಯಬೇಕಾಗಿದೆ.

ಸಾಧಕರು ಯಾವ ಧರ್ಮದಲ್ಲಿ ಜನಿಸಿದ್ದಾರೆ, ಆ ಜಾತಿಯವರು – "ಇವರು ನಮ್ಮ ಧರ್ಮಲ್ಲಿ ಹುಟ್ಟಿದವರು" ಎಂದು ಬೀಗುವದು ಅಥವಾ ಆ ಸಾಧಕರು ಯಾವ ಧರ್ಮ ಪ್ರಚಾರ ಮಾಡಿದ್ದಾರೋ, ಆ ಧರ್ಮದವರು "ಇವರು ನಮ್ಮ ಧರ್ಮ ಪ್ರಚಾರಕರು, ನಾವೇ ಶ್ರೇಷ್ಠ" ಎಂದು ಬೀಗುವುದು ತರವಲ್ಲ. ಇದು ಸಮಾನತೆಗೆ ವ್ಯತಿರಿಕ್ತವಲ್ಲವೆ?

ದುರದೃಷ್ಟವೆಂದರೆ ಕೆಲವರು ಅಂಥವರನ್ನು ಒಂದು ಸೀಮಿತ ಗುಂಪಿನ ನಾಯಕ, ತಮ್ಮ ಸ್ವಂತ ಆಸ್ತಿ, ಎನ್ನುವಂತೆ ಬಿಂಬಿಸಿ ಸಂಕುಚಿತ ಭಾವನೆ ತೋರುತ್ತಾರೆ. ಈಗಿನ ಸಮಾಜದಲ್ಲಿ ಮಹಾತ್ಮಾ ಗಾಂಧಿ, ಡಾ. ಅಂಬೇಡ್ಕರ್ ಅವರಂತಹ ಮಹಾತ್ಮರಿಗೂ ಹೀಗೆಯೇ ಕೆಲವು ಸಂದರ್ಭದಲ್ಲಿ ಕೆಲವರು ಬಿಂಬಿಸುವದನ್ನು ಕಾಣುತ್ತಲಿದ್ದೇವೆ.

ಯಾದವ ಕುಲದಲ್ಲಿ ಶ್ರೀಕೃಷ್ಣ, ಕ್ಷತ್ರಿಯ ಕುಲದಲ್ಲಿ ಶ್ರೀ ರಾಮ ಜನಿಸಿದರೂ ಆರಾಧಿಸುತ್ತಿಲ್ಲವೆ? ವಾಲ್ಮೀಕಿ ಬರೆದ ರಾಮಾಯಣ, ಡಾ. ಅಂಬೇಡ್ಕರ್ ನೇತೃತ್ವದಲ್ಲಿ ರಚಿಸಿದ ಸಂವಿಧಾನ, ಹಾಗೂ ವ್ಯಾಸಮಹರ್ಷಿಗಳಿಂದ ಹೇಳಿಸಲ್ಪಟ್ಟು ಬರೆಸಿದ ಮಹಾಭಾರತ ಗ್ರಂಥಗಳನ್ನು ಗೌರವಿಸುತ್ತಿಲ್ಲವೆ? ಯಾವುದೇ ಗ್ರಂಥ, ಅಥವಾ ಸಾಧಕರ ತತ್ವಗಳು ಮಾನವೀಯತೆಯಿಂದ ಕೂಡಿದ ಮನುಜ ಕುಲದ ಉದ್ಧಾರಕ್ಕೆಂದು ಇದ್ದರೆ, ಜಾತಿ ಮತ, ಪಂಥ ಯಾವುದೂ ಲೆಕ್ಕಕ್ಕೆ ಬರುವುದಿಲ್ಲ.

ಧಾರ್ಮಿಕ ಸಾಧಕರು' ಲೌಕಿಕ ಸಾಧನೆ ಮತ್ತು ಲೌಕಿಕ ಫಲ – ಎರಡನ್ನೂ ತಾತ್ಕಲಿಕ ಎಂದೇ ತಿಳಿಸುತ್ತಾರೆ. ಯಾಕೆಂದರೆ ಇವರಡೂ ಕ್ಷಯ ಅಂದರೆ ಶಾಶ್ವತ ಅಲ್ಲ ಎಂದರ್ಥ.

ಪಾರಮಾರ್ಥಿಕ ಸಾಧನೆ, ಮತ್ತು ಅದರ ಫಲ– ಇವೆರಡೂ ಅಕ್ಷಯವಾಗಿರುತ್ತವೆ. ಅವು ನಾಶವಾಗದ ಮತ್ತು ಮನುಷ್ಯನ ಮೋಕ್ಷವೆಂಬ ಶಾಶ್ವತ ಸುಖಕ್ಕೆ ಕಾರಣವಾಗುತ್ತವೆ.

ಜಗಜ್ಯೋತಿ ಬಸವಣ್ಣನವರಂತಹ ಎಲ್ಲ ಮಹಾನ್ ಸಾಧಕರ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಸ್ವಯಂ ಉದ್ದಾರವಾಗುವದಲ್ಲದೇ ಸರ್ವ ಸಮಾಜಗಳು ಉದ್ಧಾರವಾಗಬಹುದು. ಆಗ ಅದೊಂದು ಬಸವಣ್ಣನವರ ಭಾವ ಸಂಬಂಧದ ಮತ್ತು ತತ್ವಾಚರಣೆಯ ಸಾರ್ಥಕ "ಬಸವ ಜಯಂತಿ" ಆಚರಣೆ ಎನಿಸಿಕೊಳ್ಳುತ್ತದೆ.

ನಿಮ್ಮ ಸಂದೇಶ ಜಗತ್ತಿನೆಡೆಗೆ, ಜಾಹೀರಾತು ನಿಮ್ಮದು, ಪ್ರಸಾರ ನಮ್ಮದು!
ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ
ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ
ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ
Print & Digital News Paper
ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
1.25 ಲಕ್ಷಕ್ಕೂ ಅಧಿಕ ಇ-ಪೇಪರ್ ಓದುಗರು
ಮುದ್ರಿತ ಜಾಹೀರಾತಿಗೆ ಮಾತ್ರ ಶುಲ್ಕ ಡಿಜಿಟಲ್ ಆವೃತ್ತಿ ಉಚಿತ*!
ಮೊದಲು ಬುಕ್ಕಿಂಗ್ ಮಾಡಿದವರಿಗೆ ಮೊದಲ ಆದ್ಯತೆ
94486 33038 hampitimes@gmail.com
ಹಂಪಿ ಟೈಮ್ಸ್ ಇ-ಪೇಪರ್
*conditions apply
ಓದುಗರು:- ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್

# ಶಿಕ್ಷಣವೇ ಸ್ವಾಭಿಮಾನದ ಬದುಕಿಗೆ ಬುನಾದಿ

## ಸಿಎಂ ಸಿದ್ದರಾಮಯ್ಯ ಹೇಳಿಕೆ | ಮುಸಲ್ಮಾನರು ಸ್ವಾಭಿಮಾನದಿಂದ ಬದುಕಲು ಶಿಕ್ಷಣ ಪಡೆಯಬೇಕು | ಹಜ್ ಯಾತ್ರಿಕರ ವಿಮಾನಯಾನ ಉದ್ಘಾಟನೆ

**ಹಂಪಿ ಟೈಮ್ಸ್ ಬೆಂಗಳೂರು**

ದೇಶದ ಒಳಿತಿಗೆ ಕನ್ನಡಿಗರ ಪರವಾಗಿ ಪ್ರಾರ್ಥಿಸಿ ಎಂದು ಹಜ್ ಯಾತ್ರಿಕರಲ್ಲಿ ಮನವಿ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಎಲ್ಲ ಧರ್ಮದವರೂ ಒಂದೇ ತಾಯಿಯ ಮಕ್ಕಳಂತೆ ಬದುಕುವುದೇ, ಸಮಾಜಕ್ಕೆ ನೀಡುವ ಉತ್ತಮ ಕೊಡುಗೆ ಎಂದು ತಿಳಿಸಿದರು.

ಅವರು ಇಂದು ಕರ್ನಾಟ ರಾಜ್ಯ ಹಜ್ ಸಮಿತಿ ಆಯೋಜಿಸಿರುವ 2025 ನೇ ಸಾಲಿನ ಹಜ್ ಯಾತ್ರಿಕರ ವಿಮಾನಯಾನವನ್ನು ಉದ್ಘಾಟಿಸಿ ಮಾತನಾಡಿದರು.

ಈ ವರ್ಷ ಸುಮಾರು 8635 ಜನ ಯಾತ್ರಿಕರು ಹಜ್ ಯಾತ್ರೆಗೆ ಹೊರಟಿದ್ದು, ಮುಂದಿನ ತಿಂಗಳ 15ರವರೆಗೆ ಸುಮಾರು 27 ವಿಮಾನಗಳಲ್ಲಿ ಪ್ರಯಾಣ ಕೈಗೊಳ್ಳಲಿದ್ದಾರೆ. ಪ್ರತಿಯೊಬ್ಬ ಮುಸಲ್ಮಾನ ತಮ್ಮ ಜೀವತಾವಧಿಯಲ್ಲಿ ಒಮ್ಮೆಯಾದರೂ ಹಜ್ ಯಾತ್ರೆ ಕೈಗೊಳ್ಳಬೇಕೆಂಬುದು ಅವರ ಪವಿತ್ರ ಆಚರಣೆಗಳಲ್ಲಿ ಒಂದಾಗಿದೆ. ಹಜ್ ಯಾತ್ರಿಕರೆಲ್ಲರಿಗೂ ಅವರ ಪ್ರಯಾಣ ಸುಖಕರವಾಗಿಲಿ ಎಂದು ಹಾರೈಸಿದರು. ಪವಿತ್ರ ಮೆಕ್ಕಾದಲ್ಲಿ ದೇಶದ ಒಳಿತಿಗೆ ಭಾರತೀಯರ ಅದರಲ್ಲಿಯೂ ಕನ್ನಡಿಗರ ಪರವಾಗಿ ಪ್ರಾರ್ಥನೆ ಮಾಡಲೆಂದು ಮುಖ್ಯಮಂತ್ರಿಗಳು ಕೋರಿದರು.

**ಸರ್ಕಾರ ಒಂದು ಧರ್ಮದ ಓಲೈಕೆ ಮಾಡುವುದಿಲ್ಲ:**
ನಮ್ಮ ಸರ್ಕಾರ ಎಂದಿಗೂ ಒಂದು ವರ್ಗ, ಧರ್ಮದ ಜನರನ್ನು ಓಲೈಸಲು ಯಾವುದೇ ಕಾರ್ಯಕ್ರಮ ಕೈಗೊಳ್ಳುವುದಿಲ್ಲ. ಕನ್ನಡ ನಾಡು ಸರ್ವಜನಾಂಗದ ಶಾಂತಿಯ ತೋಟವಾಗಬೇಕೆಂಬುದು ನಮ್ಮ ಆಶಯ. ದೇಶದಲ್ಲಿ ವಿವಿಧ ಜಾತಿ ಧರ್ಮಗಳಿಗೆ ಸೇರಿದವರಾದರೂ, ನಾವೆಲ್ಲರೂ ಮೊದಲು ಮಾನವರಾಗಬೇಕು. ಯಾವ ಧರ್ಮವೂ ಮನುಷ್ಯತ್ವವನ್ನು ಹೊರತು ಮೃಗೀಯ ತತ್ವವನ್ನು ಬೋಧಿಸುವುದಿಲ್ಲ. ಮಾನವತಾ ಸಮಾಜವನ್ನು ನಿರ್ಮಿಸಬೇಕು. ದ್ವೇಷ, ಅಸೂಯೆಗಳಿಂದ ಯಾವ ಸಾಧನೆಯೂ ಸಾಧ್ಯವಿಲ್ಲ. ಸಮಸಮಾಜ, ಸೌಹಾರ್ದ ಯುತ ಸಮಾಜ ನಿರ್ಮಾಣವಾಗಬೇಕಾದರೆ ಪರಸ್ಪರ ಗೌರವಾದರಗಳು ಇರಬೇಕು ಎಂದರು.

**ಎಲ್ಲಾ ಧರ್ಮದ ಬಡವರಿಗೂ ಸಮಾನತೆಯ ಬದುಕು:**
ನಮ್ಮ ಸಂವಿಧಾನ ಸಹಿಷ್ಣುತೆ ಮತ್ತು ಸಹಬಾಳ್ವೆಯನ್ನು ಸ್ಪಷ್ಟವಾಗಿ ತಿಳಿಸಿದ್ದು, ಬೇರೆ ಧರ್ಮವನ್ನು ಸಹಿಸಿಕೊಳ್ಳುವ ಗುಣವನ್ನು ತಿಳಿಸುತ್ತದೆ. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವವೆಂಬ ಮೂರು ಅಂಶಗಳನ್ನು ಸಂವಿಧಾನ ಬೋಧಿಸುವಂತೆ, ಬಾಳಬೇಕಿದೆ. ಯಾರನ್ನೂ ದ್ವೇಷ ದಿಂದ, ವೈರತ್ವದಿಂದ ಗೆಲ್ಲಲು ಸಾಧ್ಯವಿಲ್ಲ ವೆಂಬು ದನ್ನು ಎಲ್ಲ ಧರ್ಮದವರೂ ಮೂಲಭೂತವಾಗಿ ಅರ್ಥೈಸಿ ಕೊಳ್ಳಬೇಕು. ನಮ್ಮ ಸರ್ಕಾರ ಕೇವಲ ಒಂದು ಧರ್ಮ ವನ್ನು ಓಲೈಸಲು ಅಥವಾ ಒಂದು ಧರ್ಮದ ಅಭಿವೃದ್ಧಿಗೆ ಕೆಲಸ ಮಾಡುವುದಿಲ್ಲ. ಸಮಾಜದ ಎಲ್ಲಾ ಧರ್ಮದ ಬಡವರೂ, ಸಮಾನತೆಯ ಬದುಕನ್ನು ತಮ್ಮದಾಗಿಸಿ ಕೊಳ್ಳಬೇಕೆಂಬುದು ನಮ್ಮ ಆಶಯ ಎಂದರು.




**ಸಮಾನತೆ, ಪ್ರೀತಿ, ವಿಶ್ವಾಸವಿರುವ ಮಾನವೀಯತೆ ಇರುವ ಸಮಾಜ ಅಗತ್ಯ:**
ಸಮಾನ ಅವಕಾಶಗಳನ್ನು ಪಡೆದು ಬದುಕಬೇಕು. ಸ್ವಾತಂತ್ರ್ಯ ಬಂದ ನಂತರ ದೇಶ ವಿಭಜನೆಯಾದಾಗ ಭಾರತದಲ್ಲಿ ಉಳಿದುಕೊಂಡ ಮುಸಲ್ಮಾನರು ಭಾರತೀ ಯರು. ಭಾರತೀಯರಾಗಿ ಇರಬೇಕೆ ಹೊರತು ಬೇರೊಂದು ಕೆಲಸ ಮಾಡುವ ಯೋಚನೆಯನ್ನು ಮಾಡ ಬಾರದು. ಮುಸಲ್ಮಾನರು ಮತ್ತು ಹಿಂದೂಗಳು ಪರಸ್ಪರರನ್ನು ನಮ್ಮ ಅಣ್ಣ ತಮ್ಮಂದಿರು ಎಂಬ ಭಾವನೆ ಬೆಳೆಸಿಕೊಳ್ಳುವುದು ಅತ್ಯಂತ ಅವಶ್ಯಕ. ಕ್ರೈಸ್ತರೂ ನಮ್ಮವರೇ ಎಂಬ ಭಾವನೆ ಬೆಳೆಸಿಕೊಂಡಾಗ ಮಾತ್ರ ಸೌಹಾರ್ದತೆ ಯಿಂದ , ಸಮಾನತೆಯಿಂದ ಬಾಳಲು ಸಾಧ್ಯವಾಗುತ್ತದೆ. ಇದನ್ನು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕು. ದೇವರು ಸಮಾನತೆಯನ್ನು ಬಯಸುತ್ತಾರೆಯೇ ಹೊರತು ದ್ವೇಷದ ಸಮಾಜವನ್ನು ಬಯಸಲು ಸಾಧ್ಯವಿಲ್ಲ. ಸಮಾನತೆ, ಪ್ರೀತಿ, ವಿಶ್ವಾಸವಿರುವ ಮಾನವೀಯತೆ ಇರುವ ಸಮಾಜವನ್ನು ಬಯಸಬಹುದೇ ಹೊರತು, ದ್ವೇಷದ ಅಸಮಾನ ಸಮಾಜವನ್ನು ಬಯಸುವುದು ಸಾಧ್ಯವಿಲ್ಲ ಎಂದರು.

**ಯಾರನ್ನೂ ಓಲೈಸುವ ಕೆಲಸ ಮಾಡೋಲ್ಲ:**
ನಮ್ಮ ಸರ್ಕಾರ ಎಲ್ಲರನ್ನೂ ಸಮಾನವಾಗಿ ಕಾಣುತ್ತದೆ. ರಾಜ್ಯದ ಬಜೆಟ್ 4 ಲಕ್ಷದ 9 ಸಾವಿರ ಕೋಟಿಯಿದ್ದರೆ, ಅದರಲ್ಲಿ ಮುಸಲ್ಮಾನರಿಗೆ ನೀಡಿರುವುದು 4500 ಕೋಟಿಗಳು. ಅದು ದೊಡ್ಡದಲ್ಲ. ಅವರರವ ಪಾಲನ್ನು ಅವರಿಗೆ ಕೊಡಬೇಕು. ಈ ದೇಶದ ಸಂಪತ್ತು ಎಲ್ಲರಿಗೂ ಹಂಚಿಕೆಯಾಗಬೇಕು. ಎಲ್ಲರಿಗೂ ಆರ್ಥಿಕ, ಸಾಮಾಜಿಕ ಶಕ್ತಿ ಬಂದಾಗ ಮಾತ್ರ ಜಾತಿ ಹೋಗಲು ಸಾಧ್ಯವಾಗುತ್ತದೆ. ಸಮಾನತೆಯಿಂದ ಕೂಡಿದ ಸಮಾಜ ನಿರ್ಮಾಣ ವಾಗುತ್ತದೆ. ರಾಜಕೀಯವಾಗಿ, ಆರ್ಥಿಕವಾಗಿ ಸಾಮಾಜಿಕ ವಾಗಿ ಹಾಗು ಶೈಕ್ಷಣಿಕವಾಗಿ ಸಮಾನತೆ ಯಿಡಬೇಕು ಎಂದರು. ಇದನ್ನೇ ಬಾಬಾ ಸಾಹೇಬ್ ಅಂಬೇಡ್ಕರ್ ಅವರೂ ಒತ್ತಿ ಹೇಳಿದ್ದರು.

ಅದರಲ್ಲಿ ನಮಗೆ ನಂಬಿಕೆ ಇದೆ. ನಮ್ಮ ಸಂವಿಧಾನ ಹೇಳಿರುವುದೇ ಅದು. ಸಂವಿಧಾನದ ಧ್ಯೇಯೋದ್ದೇಶ ಗಳನ್ನು, ಆಶಯಗಳನ್ನು ಜಾರಿ ಮಾಡುತ್ತೇವೆಯೇ ಹೊರತು ಯಾರನ್ನೂ ಓಲೈಸುವ ಕೆಲಸ ಮಾಡೋಲ್ಲ. ನಮಗೆ ಎಲ್ಲರೂ ಒಂದೇ ಎಂದರು. ನ್ಯಾಯಯುತವಾಗಿ ಸಿಗಬೇಕಾದ. ಹಕ್ಕುಗಳನ್ನು ದೊರಕಿಸುವ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಯಾರೂ ಏನೇ ಹೇಳಿದರೂ ಅದಕ್ಕೆ ನಾವು ಸೊಪ್ಪು ಹಾಕುವವರಲ್ಲ. ನಮಗೆ ಸಂವಿಧಾನ ಮುಖ್ಯ. ಅದರ ಆಶಯಗಳನ್ನು ಈಡೇರಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ. ಪ್ರಜಾಪ್ರಭುತ್ವ ಹಾಗೂ ಸಂವಿಧಾನವನ್ನು ರಕ್ಷಣೆ ಮಾಡುತ್ತೇವೆ ಎಂದರು.

**ಮಂಗಳೂರು, ಕಲಬುರ್ಗಿಯಲ್ಲಿ ಹಜ್ ಭವನ:**
ಮಂಗಳೂರಿನಲ್ಲಿ ಹಜ್ ಭವನ ನಿರ್ಮಾಣಕ್ಕೆ ಮೇ 16 ರಂದು ಶಂಕುಸ್ಥಾಪನೆ ಮಾಡಲಾಗುವುದು ಎಂದು ಮುಖ್ಯಮಂತ್ರಿಗಳು ಈ ಸಂದರ್ಭದಲ್ಲಿ ಘೋಷಿಸಿದರು. ಜಮೀರ್ ಅಹಮ್ಮದ್ ಖಾನ್ ಅವರು ಕಲಬುರಗಿಯಲ್ಲಿ ಹಾಜ್ ಭವನ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಲಿದ್ದಾರೆ ಎಂದರು. ಬೆಂಗಳೂರಿನಲ್ಲಿ ಹಜ್ ಭವನಕ್ಕೆ ಬರುವ ಪ್ರವಾಸಿಗರು ಉಳಿದುಕೊಳ್ಳಲು ವ್ಯವಸ್ಥೆ ಕಲ್ಪಿಸಲು ಈ ಬಾರಿ 10 ಕೋಟಿ ಅನುದಾನ ನೀಡಲಾಗಿದೆ ಎಂದರು.

**ಮುಸಲ್ಮಾನರು ಸ್ವಾಭಿಮಾನದಿಂದ ಬದುಕಲು ಶಿಕ್ಷಣ ಪಡೆಯಬೇಕು:**
ಮುಸಲ್ಮಾನರಲ್ಲಿ ಶಿಕ್ಷಣದ ಮಟ್ಟ ಹೆಚ್ಚಾಗಬೇಕು. ಸಾಚಾರ್ ಸಮಿತಿ ವರದಿಯಲ್ಲಿ ಶಿಕ್ಷಣದ ಪ್ರಮಾಣ ಬಹಳ ಕಡಿಮೆ ಇದೆ ಎಂದು ತಿಳಿಸಲಾಗಿದೆ. ಶಿಕ್ಷಣ ಇಲ್ಲದಿದ್ದರೆ ಸ್ವಾಭಿಮಾನದಿಂದ ಬದುಕಲು ಸಾಧ್ಯವಿಲ್ಲ. ಪ್ರತಿಯೊಬ್ಬರೂ ಶಿಕ್ಷಣವನ್ನು ಪಡೆದುಕೊಳ್ಳಲೇಬೇಕು ಎಂದು ಸಿಎಂ ಆಗ್ರಹಿಸಿದರು.

**ಕರ್ನಾಟಕದಲ್ಲಿ ಯಾರೂ ಆತಂಕ ಪಡಬೇಕಾಗಿಲ್ಲ:**
ನಾವು ಯಾರಿಗೂ ಅನ್ಯಾಯ ಮಾಡುವುದಿಲ್ಲ. ಎಲ್ಲರಿಗೂ ರಕ್ಷಣೆ ಕೊಡುವುದು ನಮ ಕರ್ತವ್ಯ. ಕರ್ನಾಟಕದಲ್ಲಿ ಯಾರೂ ಆತಂಕ ಪಡಬೇಕಾಗಿಲ್ಲ ಎಂದು ಸಿಎಂ ಭರವಸೆಯಿತ್ತರು. ಕಾನೂನಿನ ಮುಂದೆ ಎಲ್ಲರೂ ಸಮಾನರು. ಎಲ್ಲರೂ ಒಂದು ತಾಯಿಯ ಮಕ್ಕಳಂತೆ ಬದುಕೋಣ ಎಂದು ಹಜ್ ಗೆ ತೆರಳುವವರು ಪ್ರಾರ್ಥನೆ ಮಾಡಿ, ಅಂತಹ ವಾತಾವರಣ ನಿರ್ಮಿಸೋಣ ಎಂದರು.

## ಕವಿ ಮನಸು

### ಸಾಂಸ್ಕೃತಿಕ ನಾಯಕರು



ಮಾನವೀಯತೆಯ ಸಾಕಾರರು
ಸರ್ವಸಮಾನತೆಯ ಹರಿಕಾರರು
ಜಗದೋದ್ಧಾರಕ ವಿಶ್ವಮಾನವರು
ಭಕ್ತಿಭಂಡಾರಿ ಬಸವಣ್ಣನವರು. /1/

ಮಾನವಧರ್ಮ ಉದ್ಧಾರ ಪ್ರೇಯರು
ತಾರತಮ್ಯ ಅಸಮಾನತೆ ನಿವಾರಣೆ ಪ್ರೇರಕರು
ವಿಶ್ವ ಮಹಾನ್ ಮಾನವತಾವಾದಿವರ್ಯರು
ಇವನಮ್ಮವ ಇವನಮ್ಮವನೆನಿಸಿಹರು /2/

ವೈಚಾರಿಕ ವೈಜ್ಞಾನಿಕ ಧುರೀಣರು
ಮೌಢ್ಯಾಚರಣೆ ವಿರೋಧಿಸಿಹರು
ಶತಶತಮಾನಗಳ ಅಂಟು ಜಾಡ್ಯ ನಿವಾರಕರು
ಮುಗ್ಧರನು ಜಾಗ್ರೃತರನ್ನಾಗಿಸಿಹರು /3/

ಜಾತಿತಾರತಮ್ಯಕೆ ರಾಮಬಾಣರು
ಸಮಾಜಮುಖಿ ಹಿತಚಿಂತಕರು
ಮನುಕುಲಕೆ ಸನ್ಮಾರ್ಗ ನಿರ್ಮಿಸಿಹರು
ಸ್ತ್ರೀ ಕುಲೋದ್ಧಾರಕ ಮಾತೃಹೃದಯವಂತರು /4/

ಪೂರ್ವಾಗ್ರಹ ಪೀಡಿತರನು ಖಂಡಿಸಿಹರು
ಕಂದಾಚಾರದ ಬಂಡಾಯಗಾರರು
ಅನುಭವಮಂಟಪ ಸಂಸ್ಥಾಪಕರು
ಸಾರ್ವಕಾಲಿಕ ಜೀವನ ಮೌಲ್ಯ ಪ್ರತಿಪಾದಕರು /5/

ಬುದ್ಧ ಬಸವ ಗಾಂಧಿ ಅಂಬೇಡ್ಕರರು
ಜಾಗತಿಕ ಮಹಾನ್ ದಾರ್ಶನಿಕವರೇಣ್ಯರು
ನಡೆನುಡಿ ಅರಿವು ಆಚಾರ ಪರಿಪಾಲಕರು
ಸಾಂಸ್ಕೃತಿಕ ನಾಯಕ ಬಸವಣ್ಣನವರು. /6/

– ಪ್ರೊ. ಶಕುಂತಲಾ.ಚನ್ನಪ್ಪ. ಸಿಂಧೂರ.
ಗದಗ

### ಬಸವ ಪಥ

ಕಾಲ ಬದಲಾದೀತು, ದಾರಿ ತಿರುಗೀತು,
ಮಾನವನೋ ಆಗಿಹ ಮೌಲ್ಯ ಹೀನ – ತಾಂತ್ರಿಕ
ವಿಜ್ಞಾನದ ಮೌಲ್ಯ ಅವಿಚ್ಛಿನ್ನ
ಇತ್ತ ಭೂಮಿಯು ಬೆಂದೀತು, ಮನಸ್ಸು
ಮ್ಲಾನವಾಯ್ತು,
ಆದರೂ ಬೆಳಕು ಹಚ್ಚಲೊಬ್ಬ ಬಂದನವ ಭುವಿ
ಬಸವಮಯ ವಾಯ್ತು!

ಕಾಯಕವೆ ಕೈಲಾಸ ಎಂದು ಘೋಷಿಸಿದ ದನಿ,
ದಿನದ ಕರ್ತವ್ಯದಿ ಶ್ರದ್ಧೆಯ ಪಾಠವಿತ್ತ ಶ್ರೇಷ್ಠಣಿ!
ಶ್ರಮದ ಬೆಲೆ ಮರೆಯೋಣವೇನು? ಜ್ಞಾನವಿಲ್ಲದ
ಪ್ರಗತಿ ವ್ಯರ್ಥ,
ಅವನ ತತ್ವವೆಲ್ಲ ನಾಡಿಗೆ ನಿತ್ಯ ಪಾಠ!

ಅನುಭವ ಮಂಟಪವದು ಸಮಾನತೆಯ ವೇದಿಕೆ,
ಜಾತಿ–ಬೇದ ಭ್ರಾಂತಿಗೆ ಹೊಡೆದ ಭಾರವಧಿಕೆ.
ಇಂದಿನ ರಾಜಕೀಯವೂ ಗೊಂದಲದ ಆಟ,
ಅವನ ವಚನವನೂ ಕೇಳಿಯೂ ಬದಲಾಗಲಿಲ್ಲ ಮತ!

ಧರ್ಮವೂ ಆತ್ಮಪಥ, ಅಲ್ಲ ರಾಜಕೀಯದ ಆಟ,
ನಿನ್ನೊಳಗಿನ ದೇವರ ನೆನೆ – ಹೊರಗಿನ ಬಿರುದೆಲ್ಲ ವ್ಯರ್ಥ.
ಬಲವಂತದ ನಂಬಿಕೆಗಳು ಬೇಡ, ಭಯದ
ಗಟ್ಟಿತನ ಬೇಡ,
ಬಸವನು ಹೇಳಿದನು – ಪ್ರೀತಿ ಮೀರಿದ ಪಥವೇ ಶ್ರೇಷ್ಠ!

ವಚನವೆಂಬ ಬೀಜ – ನೈತಿಕತೆಯ ಬಿತ್ತನೆ,
ಪ್ರತಿ ವಾಕ್ಯವೂ ಗಂಭೀರ – ಪ್ರತಿಯೊಂದು
ಪ್ರಶ್ನೆಗೂ ಉತ್ತರವಿದು.
ನೀವೇ ದೇವರ ಮಂದಿರ, ನಿನ್ನ ಮನವೆ ದರ್ಶನ!
ಓ ಮನುಜಾ, ಹೊರಗೆ ಹುಡುಕದೆ ನಿನ್ನೊಳಗೆ
ನೋಡು!

ವಿದ್ಯೆ ಬೇಕು ಮೌಲ್ಯದೊಂದಿಗೆ, ಅರಿವು ಬೇಕು
ಸತ್ಯದ ಜೊತೆ,
ನಿರ್ಣಯ ಮಾಡುವ ನೀತಿಯಲಿ ಬೆಳೆವ ಶಿಕ್ಷಣದ ಹಣತೆ
ಬಸವಣ್ಣನ ಪಾಠ, ಇಂದಿಗೂ ಜೀವಂತವಿದೆ,
ವಚನದ ದೀಪ, ಬೆಳಕಿತ್ತ ದಿಕ್ಕು ದಿಕ್ಕಲೂ
ಸತ್ಯವಿದೆ!

– ಡಾ. ಪ್ರಸನ್ನ ದೇವರ ಮಠ ಅನಿಲಕುಮಾರ್
ಮಾಗಳ

# ಲಂಚ ಇಲ್ಲದೇ ಗ್ರಾಮಾಡಳಿತಾಧಿಕಾರಿಗಳ ನೇಮಕ



**ಮೊದಲ ಪುಟದಿಂದ**
ಗ್ರಾಮ ಆಡಳಿತಾಧಿಕಾರಿಗಳ ಜವಾಬ್ದಾರಿ ಬಹಳ ಮಹತ್ವದ್ದು. ರೈತರಿಗೂ ಗ್ರಾಮ ಆಡಳಿತಾಧಿಕಾರಿಗಳಿಗೆ ಹತ್ತಿರದ ಸಂಬಂಧವಿದ್ದು, ಪ್ರತಿಯೊಬ್ಬ ರೈತರ ಪರಿಚಯ ಅವರಿಗಿರುತ್ತದೆ. ಅವರ ಭೂಮಿಯ ಕುರಿತು ಮಾಹಿತಿ ಗೊತ್ತಿರುತ್ತದೆ. ಅವರ ಪರಿಚಯವಿಟ್ಟುಕೊಂಡು ಅಗತ್ಯ ದಾಖಲಾತಿ ಗಳನ್ನು ಒದಗಿಸುವುದು ನಿಮ್ಮ ಕೆಲಸ ಎಂದು ಮುಖ್ಯಮಂತ್ರಿಗಳು ಕರೆ ನೀಡಿದರು.

ಗ್ರಾಮ ಆಡಳಿತಾಧಿಕಾರಿಗಳು ಉತ್ತಮ ನಡತೆ, ಸಂಪರ್ಕವನ್ನು ಹೊಂದಿದ್ದರೆ ರೈತರು ನಿಮ್ಮ ಮಾತನ್ನು ಕೇಳುತ್ತಾರೆ. ಗ್ರಾಮ ಆಡಳಿತಾಧಿಕಾರಿಗಳು ಒಳ್ಳೆ ರೀತಿಯ ಕೆಲಸ ಮಾಡಿಕೊಟ್ಟರೆ ಅವರ ಮೇಲೂ ಗೌರವ ವಿರುತ್ತದೆ. ಜನರ ಕೆಲಸ ದೇವರ ಕೆಲಸ ಎಂದು ನೆನೆಪಿಟ್ಟುಕೊಳ್ಳಬೇಕು. ನಾವಿರುವುದೇ ಜನರ ಸೇವೆಗಾಗಿ ಎನ್ನುವುದನ್ನು ಮರೆಯಬಾರದು. ಆರು ಲಕ್ಷ ಜನ ಸರ್ಕಾರಿ ನೌಕರರು ಅವರಿಗಾಗಿಯೇ ಇರುವುದು. ರಾಜಕಾರಣಿಗಳು, ಜನರಿಂದ ಆಯ್ಕೆಯಾದರೆ, ಸರ್ಕಾರದಿಂದ ಆಯ್ಕೆಯಾದ ಸರ್ಕಾರಿ ನೌಕರರು ಜನಸೇವೆಯನ್ನು ಅವರ ಧ್ಯೇಯವಾಗಿಸಬೇಕು.

ಕಂದಾಯ ಇಲಾಖೆಯದ್ದು ಅತ್ಯಂತ ಜವಾಬ್ದಾರಿ ಯುತ ಕೆಲಸ. ಇಲ್ಲಿ ಸುಧಾರಣೆಗಳನ್ನು ತರಬೇಕೆಂದು ಕೃಷ್ಣಬೈರೇಗೌಡರಿಗೆ ಸೂಚಿಸ ಲಾಗಿತ್ತು,ಅವರು ಈಗಾಗಲೇ ಅನೇಕ ಸುಧಾರಣೆ ಗಳನ್ನು ತಂದಿದ್ದಾರೆ. ಅವರಿಗೆ ಇನ್ನಷ್ಟ ಸುಧಾರಣೆ ಗಳನ್ನು ತರುವ ಶಕ್ತಿ ಇದೆ ಎಂದು ನಂಬಿರುವುದಾಗಿ ತಿಳಿಸಿದರು.

**ಅಧಿಕಾರಿಗಳು ರೈತರಿಗೆ ಎಲ್ಲ ಸಮಯದಲ್ಲಿಯೂ ಲಭ್ಯವಿರಬೇಕು**
ಗ್ರಾಮ ಆಡಳಿತಾಧಿಕಾರಿಗಳು ತಮ್ಮ ವ್ಯಾಪ್ತಿಯ ಪಂಚಾಯಿತಿಯ ಕೇಂದ್ರಸ್ಥಾನದಲ್ಲಿಯೇ ವಾಸ್ತವ್ಯ ವಿರುವುದರಿಂದ ರೈತರಿಗೆ ಎಲ್ಲ ಸಮಯದಲ್ಲಿಯೂ ಲಭ್ಯವಿರಲು ಸಾಧ್ಯವಾಗುತ್ತದೆ. ರೈತರ ಮನೆಮನೆಗೆ ಭೇಟಿ ನೀಡಿ ಅವರ ಕುಂದುಕೊರತೆಗಳನ್ನು ಆಲಿಸಬೇಕು. ಗ್ರಾಮ ಆಡಳಿತಾಧಿಕಾರಿಗಳ ಮಂಜೂ 9834 ಮಂಜೂರಾದ ಹುದ್ದೆಗಳಿಗೆ ಲ್ಯಾಪಟಾಪ್ ನೀಡಲು ಸರ್ಕಾರ ನಿರ್ಧರಿಸಿದ್ದು, ಮೊದಲನೇ ಹಂತದಲ್ಲಿ 4000 ಲ್ಯಾಪ್ ಟಾಪ್ ಗಳನ್ನು ಇಂದು ನೀಡಲಾಗುತ್ತಿದೆ. ಯಾವುದೇ ಕಾರಣಕ್ಕೆ ರೈತರಿಗೆ ತೊಂದರೆ ಕೊಡುವುದಾಗಲಿ, ಭ್ರಷ್ಟಾಚಾರಕ್ಕಾಗಲಿ ಅವಕಾಶ ಕೊಡಬಾರದು. ಸಣ್ಣ ಹಿಡುವಳಿದಾರರು ಹೆಚ್ಚಿನ ಸಂಖ್ಯೆಯಲ್ಲಿದ್ದು ಅವರಿಗೆ ಅನುಕೂಲ ಕಲ್ಪಿಸುವುದು ಗ್ರಾಮ ಆಡಳಿತಾಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ ಎಂದರು.

**ಭೂಮಿ ಬೀಟ್ ಕಾರ್ಯಕ್ರಮ**
ಕೃಷಿ, ಲಾಭದಾಯಕ ವೃತ್ತಿಯಾಗಿ ಉಳಿದು ಕೊಂಡಿಲ್ಲ. ಅನ್ನದಾತರ ಹಾಗೂ ನಾಡಿನ ಒಳಿತಿಗೆ ಕೆಲಸ ಮಾಡುತ್ತಿರುವ ಅರಿವಿರಬೇಕು. ರೈತರಿಗೆ ಭೂಮಿ ಬೀಟ್ ಕಾರ್ಯಕ್ರಮ ಸರ್ಕಾರ ಜಾರಿಗೆ ತಂದಿದೆ. ವಿದ್ಯಾರ್ಥಿದೆಸೆಯಲ್ಲಿ ವ್ಯವಸಾಯ ಕೈಗೊಂಡ ಸಂದರ್ಭದಲ್ಲಿ ಪಕ್ಕದ ರೈತ ಜಮೀನನ್ನು ಅತಿಕ್ರಮಣ ಮಾಡಿದ್ದು, ಈ ಬಗ್ಗೆ ನಡೆದ ಪಂಚಾಯತಿಯ ಬಗ್ಗೆ ತಮ್ಮ ಅನುಭವ ಹಂಚಿಕೊಂಡ ಮುಖ್ಯಮಂತ್ರಿಗಳು, ಜಮೀನುಗಳನ್ನು ಅತಿಕ್ರಮಣದ ಇಂತಹ ಸಮಸ್ಯೆಗಳನ್ನು ನಿವಾರಿಸಲು ಭೂಮಿ ಬೀಟ್ ಕಾರ್ಯಕ್ರಮ ಅನುಕೂಲ ಕಲ್ಪಿಸಿದೆ ಎಂದರು.

**ರೈತರಿಗೆ ಅನ್ಯಾಯವಾಗದಂತೆ ಕಾರ್ಯನಿರ್ವಹಿಸಿ**
ಗ್ರಾಮ ಆಡಳಿತಾಧಿಕಾರಿಗಳು ಎಚ್ಚರಿಕೆಯಿಂದ ಕಾರ್ಯನಿರ್ವಹಿಸಿ, ರೈತರಿಗೆ ಅನ್ಯಾಯವಾಗದಂತೆ ಕರ್ತವ್ಯ ನಿರ್ವಹಿಸಬೇಕು. ಜಮೀನಿನ ದಾಖಲಾತಿಗಳ ಹಾಗೂ ಸರ್ವೇಗಳು ಸಮರ್ಪಕವಾಗಿ ನಡೆದರೆ ಗ್ರಾಮಗಳಲ್ಲಿ ಭೂಮಿ ಕಲಹವಿಲ್ಲದೇ ಬಹುಮಟ್ಟಿಗೆ ನೆಮ್ಮದಿ ನೆಲಸಲು ಸಾಧ್ಯವಿದೆ. ಇಂದು ನೇಮಕಗೊಂಡಿರುವ ಗ್ರಾಮ ಆಡಳಿತಾಧಿಕಾರಿಗಳು ಉದಾಸೀನತೆಯ ಭಾವನೆಯನ್ನು ತಳೆಯದೇ ಪ್ರಾಮಾಣಿಕವಾಗಿ ದುಡಿಯಬೇಕು ಎಂದು ತಿಳಿಸಿ ಶುಭಹಾರೈಸಿದರು.

ಕಂದಾಯ ಇಲಾಖೆ ಸಚಿವ ಕೃಷ್ಣಬೈರೇಗೌಡ, ಶಾಸಕ ಶ್ರೀನಿವಾಸ್, ಮುಖ್ಯಮಂತ್ರಿಗಳ ಅಪರ ಕಾರ್ಯದರ್ಶಿ ಎಲ್.ಕೆ.ಅತೀಕ್ , ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕಠಾರಿಯಾ ಉಪಸ್ಥಿತರಿದ್ದರು.

# ನರೇಗಾ ಸೌಲಭ್ಯಗಳು ಕೈಪಿಡಿಗೆ ಸೀಮಿತ

## ಕಾರ್ಮಿಕರಿಗೆ ಅಳತೆ ನೆಪದಲ್ಲಿ ಕಡಿಮೆ ಕೂಲಿ ಎಐವೈಎಫ್ ಆರೋಪ




**ಹಂಪಿ ಟೈಮ್ಸ್ ಹರಪನಹಳ್ಳಿ**
ಮಹತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ (ಮನರೇಗಾ) ಯೋಜನೆಯಲ್ಲಿನ ಸಮಸ್ಯೆಗಳನ್ನು ಪರಿಹರಿಸುವಂತೆ ಒತ್ತಾಯಿಸಿ ತಾಲೂಕು ಅಖಿಲ ಭಾರತ ಯುವಜನ ಫೇಡರೇಷನ್ ಕಾರ್ಯಕರ್ತರು ಪಟ್ಟಣದ ತಾಲೂಕು ಪಂಚಾಯಿತಿ ಮುಂಬಾಗ ವಿವಿಧ ಬೇಡಿಕೆ ಈಡೇರಿಕೆ ಒತ್ತಾಯಿಸಿ ಪ್ರತಿಭಟಿಸಿದರು.
ಸಂಘಟನೆಯ ರಾಜ್ಯ ಕಾರ್ಯದರ್ಶಿ ಎಚ್.ಎಂ.ಸಂತೋಷ ಮಾತನಾಡಿ, ಸರಕಾರವು ಬಡ ಕಾರ್ಮಿಕರಿಗೆ ಉದ್ಯೋಗದ ಪ್ರದೇಶದಲ್ಲಿ ಕಲ್ಪಿಸುವ ಸೌಲಭ್ಯಗಳ ಸೂಚನೆಯು ತಾಲೂಕಿನಲ್ಲಿ ಕೇವಲ ಉದ್ಯೋಗ ಖಾತ್ರಿ ಯೋಜನೆ ಕೈಪಿಡಿಗೆ ಸೀಮಿತವಾಗಿರುವಂತಿದೆ.

ಸರಕಾರದ ನಿಯಮದ ಪ್ರಕಾರ ಕಾರ್ಮಿಕರು ಕೆಲಸ ಮಾಡುವ ಜಾಗದಲ್ಲಿ ಪ್ರಥಮ ಚಿಕಿತ್ಸೆಯ ಕಿಟ್, ಶ್ರಮಿಕರು ಬಿಸಿಲಿನಿಂದ ಬಳಲಿದಾಗ ವಿರಮಿಸಲು ನೆರಳಿನ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ಕೂಲಿ ಕಾರ್ಮಿಕರ ಮಕ್ಕಳಿಗಾಗಿ ಕೂಸಿನ ಮನೆ ಮುಂತಾದವುಗಳು ಈಗಾಗಲೇ ಕೆಲಸ ಮಾಡುತ್ತಿರುವ ಪ್ರದೇಶಗಳಲ್ಲಿ ಕಂಡು ಬಂದಿರುವುದಿಲ್ಲ. ಸರಕಾರದ ಆದೇಶಗಳ ಜಾರಿಗೊಳಿಸದೇ ಅಧಿ ಕಾರಿಗಳು ನಿರ್ಲಕ್ಷ್ಯ ಮಾಡುತ್ತಿರು ವುದು ನೋಡಿದರೆ ಬಡ ಕೂಲಿ ಕಾರ್ಮಿಕರ ಬಗ್ಗೆ ಅವರಿಗಿರುವ ಧೋರಣೆ ಎಂತಹದ್ದು ಎಂಬುದು ಕಂಡು ಬರುತ್ತದೆ ಎಂದರು.

ಎಐವೈಎಫ್ ತಾಲೂಕು ಗೌರವದ್ಯಕ್ಷ ಬಳಿಗನೂರು ಕೊಟ್ರೇಶ್ ಮಾತನಾಡಿ, ಕಾರ್ಮಿಕರು ಬೆವರು ಸುರಿಸಿ ದುಡಿದ ಕೆಲಸಕ್ಕೆ ಸರಿಯಾದ ಕೂಲಿ ಹಣವನ್ನು ಹಾಕದೇ ಅಳತೆಯ ನೆಪವನ್ನು ಹೇಳಿ ಕಡಿಮೆ ಕೂಲಿ ಹಾಕುತ್ತಿದ್ದಾರೆ. ಪಂಚಾ ಯಿತಿ ವ್ಯಾಪ್ತಿಯ ಆಧಿಕಾರಿಗಳಿಗೆ ಬಡ ಜನರಿಗೆ ನ್ಯಾಯ ಸಮ್ಮತ ಕೂಲಿ ದೊರಕದೆ ಅವರಿಗೆ ಅನ್ಯಾಯ ಮಾಡಿ ಯೋಜನೆಯನ್ನು ಪಟ್ಟಭದ್ರ ಹಿತಾಸಕ್ತಿಗಳ ಬಳಕೆಗೆ ಅನುಕೂಲಿ ಸುವಂತೆ ಕೆಲಸ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕು ಅದ್ಯಕ್ಷ ಅನಿಲ್ ಕುಮಾರ್ ಮಾತನಾಡಿ, ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಮನವಿ ಸಲ್ಲಿಸಿದರು.

ಎಐವೈಎಫ್ ತಾಲೂಕು ಉಪಾದ್ಯಕ್ಷೆ ತೊಗರಿಕಟ್ಟಿ ಭಾಗ್ಯಮ್ಮ, ಖಾಜಾಂಚಿ ನೀಲಮ್ಮ, ತಾಲೂಕು ಕಾರ್ಯದರ್ಶೀ ಬಿ.ಅಭಿಷೇಕ್, ಮಾಂತೇಶ್, ಶಾರದಾ, ಮಂಜವ್ವ, ವನ್ನವ್ವ, ಹನುಮಂತಪ್ಪ, ಕೊಟ್ರಪ್ಪ, ಮಹೇಶ, ಚನ್ನಬಸಪ್ಪ, ಚಂದ್ರಪ್ಪ, ರುದ್ರಗೌಡ, ಕುಮಾರ, ರಾಮಚಂದ್ರ ಸೇರಿದಂತೆ ಆನೇಕರು ಭಾಗವಹಿಸಿದ್ದರು.

# ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆ

**ಮೊದಲ ಪುಟದಿಂದ**
ಸಮಾಜ ಕಲ್ಯಾಣ ಇಲಾಖೆಯ ಕಚೇರಿಯಲ್ಲಿ ಕಂಟ್ರೋಲ್ ರೂಂ ಗಳನ್ನು ಸ್ಥಾಪಿಸಲಾಗಿದೆ. ಸಮೀಕ್ಷೆಯ ಕುರಿತು ಯಾವುದೇ ಮಾಹಿತಿ ಪಡೆಯಲು ವಿಜಯನಗರ ರಮೇಶ್ 8095002829, ಹೊಸಪೇಟೆ ನಜೀಮಾ ಭಾನು 9108777499, ಹಗರಿಬೊಮ್ಮನಹಳ್ಳಿ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರಾದ ಆನಂದ.ವೈ.ಡೊಳ್ಳಿನ 9901980762, ಕೂಡ್ಲಿಗಿ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರಾದ ಶಾಹೇಖಾ ಅಹ್ಮದಿ 8105909630, ಹಡಗಲಿ ಕಚೇರಿ ಅಧೀಕ್ಷಕರಾದ ಜ್ಯೋತಿ 9482608061 ಹರಪನಹಳ್ಳಿ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರಾದ ಗಂಗಪ್ಪ.ಎಸ್.ಆರ್ 9 7 3 9 0 94433 ಅಧಿಕಾರಿಗಳನ್ನು ಸಂಪರ್ಕಿಸ ಬಹುದಾಗಿದೆ ಎಂದು ತಿಳಿಸಿದ್ದಾರೆ.